Bruhat Bengaluru
Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕನ್ನಡ ದಿನಪತ್ರಿಕೆಗಳ ತುಣಕು

## 22-12-2020



# ಪರಿವಿಡಿ

1. ಪ್ರಜಾ ವಾಣಿ
2. ಕನ್ನಡ ಪ್ರಭ
3. ವಿಜಯ ಕರ್ನಾಟಕ
4. ವಿಜಯ ವಾಣಿ
5. ವಿಶ್ವ ವಾಣಿ
6. ಉದಯ ವಾಣಿ
7. ಸಂಯುಕ್ರ ಕರ್ನಾಟಕ
8. ಹೊಸ ದಿಗಂತ
9. ವಾರ್ತಾ ಭಾರತಿ
10. ಸಂಜೆ ವಾಣಿ
11. ಈ ಸಂಜೆ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

# ‘ಮೈ ಸಿಟಿ ಮೈ ಬಜೆಟ್’ ಅಭಿಯಾನಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೌಚಾಲಯ ಮತ್ತು ಪಾದಚಾರಿ ಮಾರ್ಗಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಜನರಿಂದ ಅಭಿಪ್ರಾಯ ಸಂಗ್ರಹಿಸಲು ‘ಮೈ ಸಿಟಿ ಮೈ ಬಜೆಟ್ 2021-22’ ಅಭಿಯಾನಕ್ಕೆ ಬಿಬಿಎಂಪಿ ಸೋಮವಾರ ಚಾಲನೆ ನೀಡಿದೆ.

ಜನಾಗ್ರಹ ತಂಡದ ಸಹಯೋಗದಲ್ಲಿ ನಡೆಯಲಿರುವ ಈ ಅಭಿಯಾನದಲ್ಲಿ ವಿಶೇಷವಾಗಿ ವಿನ್ಯಾಸಗೊಳಿಸಿದ ಬಜೆಟ್ ಬಸ್ ಮತ್ತು 7 ಎಲೆಕ್ಟ್ರಿಕ್ ಆಟೊರಿಕ್ಷಾಗಳ ಮೂಲಕ ಅಭಿಪ್ರಾಯ ಸಂಗ್ರಹಿಸಲಾಗುತ್ತದೆ. ಅಭಿಯಾನಕ್ಕೆ ಬಿಬಿಎಂಪಿ ಆಯುಕ್ತ ಎನ್. ಮಂಜುನಾಥಪ್ರಸಾದ್ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ‘ಪಾಲಿಕೆಯ ವ್ಯಾಪ್ತಿಯಲ್ಲಿ ಸುಮಾರು 14 ಸಾವಿರ ಕಿಲೋ ಮೀಟರ್ ರಸ್ತೆಯಿದೆ. ಈ ಎಲ್ಲ ರಸ್ತೆಗಳಲ್ಲಿ ಪಾದಚಾರಿ ಮಾರ್ಗ ಇರಬೇಕೆಂಬುದು ನಾಗರಿಕರ ಆಶಯ. ಕೆಲ ರಸ್ತೆಗಳಲ್ಲಿ ಇಲ್ಲ, ಕೆಲವೆಡೆ ಇದ್ದರೂ ಸಾರ್ವಜನಿಕರು ಬಳಸಲು ಆಗದಂತಹ ಪರಿಸ್ಥಿತಿ ಇದೆ' ಎಂದರು.




ಮೈ ಸಿಟಿ ಮೈ ಬಜೆಟ್ ಅಭಿಯಾನಕ್ಕೆ ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ ಪ್ರಸಾದ್ ಚಾಲನೆ ನೀಡಿದರು. ವಿಶೇಷ ಆಯುಕ್ತ ಡಿ. ರಂದೀಪ್ ಇತರರು ಇದ್ದರು

‘ಈ ಅಭಿಯಾನವು ಜನವರಿ 7ರ ತನಕ ನಡೆಯಲಿದೆ. ಪಾದಚಾರಿ ಮಾರ್ಗ ಹಾಗೂ ಸಾರ್ವಜನಿಕ ಶೌಚಾಲಯಗಳ ನಿರ್ಮಾಣದ ಬಗ್ಗೆ ಸಾರ್ವಜನಿಕರಿಂದ ಅಭಿಪ್ರಾಯ ಪಡೆದುಕೊಂಡು ಮುಂದಿನ ಬಜೆಟ್‌ನಲ್ಲಿ ಸೇರಿಸಲಾಗುವುದು. ವೆಬ್‌ಸೈಟ್ ಮತ್ತು ವಾಟ್ಸ್‌ಆ್ಯಪ್ ಮೂಲಕವೂ ಅಭಿಪ್ರಾಯ ನೀಡಬಹುದು’ ಎಂದು ತಿಳಿಸಿದರು.

ವಿಶೇಷ ಆಯುಕ್ತ ಡಿ.ರಂದೀಪ್ ಮಾತನಾಡಿ, ‘ಸಾರ್ವಜನಿಕ ಶೌಚಾಲಯಗಳ ನಿರ್ಮಾಣಕ್ಕೆ ರಾಜ್ಯ ಸರ್ಕಾರ ಹಾಗೂ ಪಾಲಿಕೆ ವತಿಯಿಂದ ಸಾಕಷ್ಟು ಅನುದಾನ ಮೀಸಲಿಡಲಾಗಿದೆ. ಆದರೆ, ಶೌಚಾಲಯಗಳನ್ನು ಎಲ್ಲಿ ನಿರ್ಮಿಸಬೇಕು ಎಂಬುದನ್ನು ಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳಲಾಗುವುದು’ ಎಂದು ಹೇಳಿದರು.

## ‘ಶೌಚಾಲಯಗಳ ಕೊರತೆ’

ಮಾನದಂಡದ ಪ್ರಕಾರ ನಗರದಲ್ಲಿ 1,600 ಸಾರ್ವಜನಿಕ ಶೌಚಾಲಯಗಳಿರಬೇಕು. ಆದರೆ, 585 ಶೌಚಾಲಯಗಳಿವೆ. ಇದರಲ್ಲಿ ಕೆಲವು ಬಳಕೆ ಮಾಡದಂತಹ ಸ್ಥಿತಿ ಇದೆ ಎಂದು ಮಂಜುನಾಥ ಪ್ರಸಾದ್ ಹೇಳಿದರು.

ಸಮರ್ಪಕ ನಿರ್ವಹಣೆ ಇಲ್ಲದ ಕಾರಣ ಬಳಕೆ ಮಾಡದ ಸ್ಥಿತಿಯಲ್ಲಿವೆ. ಮೂತ್ರ ವಿಸರ್ಜನೆ ಮಾಡುವ ಸಾರ್ವಜನಿಕ ಸ್ಥಳಗಳನ್ನು ಗುರುತಿಸಿ ಸರಿಪಡಿಸುವ ಕೆಲಸ ಮಾಡಬೇಕಿದೆ. ಎಲ್ಲೆಲ್ಲಿ ಶೌಚಾಲಯಗಳ ಅಗತ್ಯವಿದೆ ಎಂಬುದರ ಕುರಿತು ಜನರಿಂದ ಅಭಿಪ್ರಾಯ ಸಂಗ್ರಹಿಸಲಾಗುವುದು ಎಂದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

# ‘ಬಿಬಿಎಂಪಿ ಕಾಯ್ದೆ: ವಲಯ ಮಟ್ಟದಲ್ಲಿ ಸಂವಾದ’

ಬೆಂಗಳೂರು: ‘ಬಿಬಿಎಂಪಿ ಕಾಯ್ದೆ 2020’ ನಗರದ ಆಡಳಿತ ವ್ಯವಸ್ಥೆಯನ್ನು ಬಲಿಷ್ಠಗೊಳಿಸುವಲ್ಲಿ ನಿಜಕ್ಕೂ ಸಮರ್ಥವಾಗಿದೆಯೇ, ಪಾಲಿಕೆಯಲ್ಲಿ ಬೇರುಬಿಟ್ಟ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಇದು ನೆರವಾಗಲಿದೆಯೇ, ಇದರಲ್ಲಿರುವ ಲೋಪಗಳೇನು?

ಇಂತಹ ಹತ್ತು ಹಲವು ವಿಚಾರಗಳ ಬಗ್ಗೆ ಬೊಮ್ಮನಹಳ್ಳಿ ಶಾಸಕ ಸತೀಶ ರೆಡ್ಡಿ ಹಾಗೂ ಶಿವಾಜಿನಗರ ಶಾಸಕ ರಿಜ್ವಾನ್ ಅರ್ಷದ್ ಅಭಿಪ್ರಾಯ ಹಂಚಿಕೊಂಡರು. ‘ಪ್ರಜಾವಾಣಿ’ ವತಿಯಿಂದ ಸೋಮವಾರ ಈ ಕುರಿತು ಏರ್ಪಡಿಸಿದ್ದ ಸಂವಾದದಲ್ಲಿ ಅವರು ಮಾತನಾಡಿದರು.

‘ಈ ಕಾಯ್ದೆ ರೂಪಿಸುವಾಗ ಜನರ ಅಭಿಪ್ರಾಯ ಪಡೆದಿಲ್ಲ. ನಗರ ಯೋಜನಾ ತಜ್ಞರ ಜೊತೆಗೂ ಚರ್ಚಿಸಿಲ್ಲ. ಈ ಹಿಂದೆ ರಚಿಸಿದ್ದ ಬಿ.ಎಸ್.ಪಾಟೀಲ ಸಮಿತಿ ವರದಿ ಹಾಗೂ ಅಬೈಡ್ ಸಂಸ್ಥೆಯ ವರದಿಯಲ್ಲಿರುವ ಅಂಶಗಳನ್ನೂ ಪರಿಗಣಿಸಿಲ್ಲ. ಅಂತರರಾಷ್ಟ್ರೀಯ ಗುಣಮಟ್ಟಕ್ಕೆ ಅನುಗುಣವಾಗಿ ಆಡಳಿತ ವ್ಯವಸ್ಥೆ ತರುವ ಆಶಯ ಈಡೇರಿಲ್ಲ. ಇನ್ನಾದರೂ ಜನರ ಹಾಗೂ ತಜ್ಞರ ಜೊತೆ ಜನರ ಜೊತೆ ಚರ್ಚಿಸಿ ಕಾಯ್ದೆ ಇನ್ನಷ್ಟು ಬಲಪಡಿಸಬೇಕು’ ಎಂದು ರಿಜ್ವಾನ್ ಸಲಹೆ ನೀಡಿದರು.

‘ಹೊಸ ಕಾಯ್ದೆ ರೂಪುಗೊಳ್ಳುವಾಗ ಸಂವಾದಗಳು ನಡೆಯಲೇಬೇಕು. ಬಿಬಿಬಿಂಪಿ ಮಸೂದೆ ಬಗ್ಗೆ ಅಧ್ಯಯನ ನಡೆಸಲು ಎಸ್.ರಘು ನೇತೃತ್ವದಲ್ಲಿ ರಚಿಸಿರುವ ವಿಧಾನ ಮಂಡಲದ ಜಂಟಿ ಪರಿಶೀಲನಾ ಸಮಿತಿ ಈಗಲೂ ಅಸ್ತಿತ್ವದಲ್ಲಿದೆ. ಕಾಯ್ದೆಯ ಬಗ್ಗೆ ಸಾರ್ವಜನಿಕ ಸಂವಾದ ಏರ್ಪಡಿಸಲು ಸರ್ಕಾರ ಬದ್ಧವಾಗಿದೆ. ಸಮಿತಿ ಇನ್ನೂ ಮೂರು ನಾಲ್ಕು ಸಭೆಗಳನ್ನು ನಡೆಸಿ ಸೂಕ್ತ ಮಾರ್ಪಾಡುಗಳನ್ನು ಮಾಡಲು ಅವಕಾಶ ಇದೆ. ವಲಯ ಮಟ್ಟದಲ್ಲಿ ಈ ಮಸೂದೆ ಬಗ್ಗೆ ಸಂವಾದ ಏರ್ಪಡಿಸಲಿದ್ದೇವೆ’ ಎಂದು ಸತೀಶ ರೆಡ್ಡಿ ತಿಳಿಸಿದರು.




## ‘ಬಿಬಿಎಂಪಿ ವಿಭಜನೆಗೆ ಸಹಮತವಿಲ್ಲ’

ಕೆಂಪೇಗೌಡರು ಕಟ್ಟಿನ ನಗರವನ್ನು ಒಡೆಯುವುದಕ್ಕೆ ಬಿಜೆಪಿಯ ಸಹಮತವಿಲ್ಲ. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಇದೇ ವಿಚಾರ ಮುಂದಿಟ್ಟು ಚುನಾವಣೆ ಎದುರಿಸಿದರು. ಫಲಿತಾಂಶ ಏನಾಯಿತು ನಿಮಗೇ ಗೊತ್ತಿದೆ. ಜನರಿಗೆ ಇದು ಇಷ್ಟವಿಲ್ಲ. ವಲಯಮಟ್ಟದ ಸಮಿತಿ ರಚಿಸಿ ಅವುಗಳಿಗೆ ಶಕ್ತಿ ತುಂಬುವ ಕೆಲಸ ಮಾಡಲಾಗುತ್ತಿದೆ ಎಂದು ಸತೀಶ ರೆಡ್ಡಿ ತಿಳಿಸಿದರು.

‘ಇಡೀ ನಗರಕ್ಕೆ ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಬೆಂಗಳೂರು ಮೆಟ್ರೋಪಾಲಿಟನ್ ಕೌನ್ಸಿಲ್ ರಚಿಸಬೇಕು. ಬಿಬಿಎಂಪಿಯನ್ನು ಪೂರ್ವ, ಕೇಂದ್ರ ಹಾಗೂ ಪಶ್ಚಿಮ ಎಂದು ವಿಭಜಿಸಿ ಪ್ರತ್ಯೇಕ ಪಾಲಿಕೆ ರಚಿಸಬೇಕು. ಮೇಯರ್ ಭೇಟಿಗೆ ಸಮಯ ಪಡೆಯಲು ನನ್ನಂತಹ ಶಾಸಕರಿಗೂ ಸಾಧ್ಯವಾಗದ ಸ್ಥಿತಿ ಇದೆ. ಇದನ್ನು ತಪ್ಪಿಸಬೇಕು’ ಎಂದು ರಿಜ್ವಾನ್ ಒತ್ತಾಯಿಸಿದರು.

## ‘ಆಸ್ತಿಗಳ ಮರು ಸರ್ವೆಗೆ ಕ್ರಮ’

‘ಸ್ವಯಂಘೋಷಿತ ಆಸ್ತಿತೆರಿಗೆ ಪದ್ಧತಿಯಲ್ಲಿ ಆಸ್ತಿ ಮಾಲೀಕರೇ ಅವುಗಳ ವಿಸ್ತೀರ್ಣವನ್ನು ಘೋಷಿಸಿಕೊಂಡಿದ್ದಾರೆ. ಕೆಲವರು ತಪ್ಪು ಲೆಕ್ಕ ನೀಡಿದ್ದಾರೆ. ಈಗ ಪಾಲಿಕೆಯೇ ಆಸ್ತಿಗಳ ಮರುಸರ್ವೆ ನಡೆಸಲಿದೆ. ಆಸ್ತಿಗಳ ಖಚಿತ ಅಳತೆ ಸಿಕ್ಕರೆ ತೆರಿಗೆ ಸಂಗ್ರಹ ಪ್ರಮಾಣ ಹೆಚ್ಚಾಗಲಿದೆ’ ಎಂದು ಸತೀಶ ರೆಡ್ಡಿ ತಿಳಿಸಿದರು.

‘ಪ್ರಜಾವಾಣಿ’ಯ ಫೇಸ್‌ಬುಕ್ ಪುಟದ ಮೂಲಕ ನೇರಪ್ರಸಾರಗೊಂಡ ಈ ಸಂವಾದದ ಪ್ರಮುಖ ಅಂಶಗಳು ಇಲ್ಲಿವೆ.

- **ನಗರದ ಆಡಳಿತ ವ್ಯವಸ್ಥೆಗೆ ಹೊಸ ದಿಸೆ ತೋರುವ ಉದ್ದೇಶ ಈ ಕಾಯ್ದೆ ಮೂಲಕ ಈಡೇರಿದೆ ಅನಿಸುತ್ತದೆಯೇ?**

**ಸತೀಶ ರೆಡ್ಡಿ:** ಖಂಡಿತಾ. ವಲಯ ಮಟ್ಟದಲ್ಲಿ ಸಮಿತಿಗಳನ್ನು ರಚಿಸಿ ಅಧಿಕಾರ ವಿಕೇಂದ್ರೀಕರಣ ಮಾಡುವುದೂ ಸೇರಿದಂತೆ ಅನೇಕ ಹೊಸ ವಿಚಾರಗಳು ಕಾಯ್ದೆಯಲ್ಲಿವೆ. ನಗರದ ಆಡಳಿತದಲ್ಲಿ ಮಹತ್ತರ ಬದಲಾವಣೆ ತರಲಿದೆ.

**ರಿಜ್ವಾನ್:** ಈ ಕಾಯ್ದೆ ಸಮಾಧಾನ ತಂದಿಲ್ಲ. ಕೆಎಂಸಿ ಕಾಯ್ದೆಯ ಅಂಶಗಳನ್ನೇ ಹೊಸ ಕಾಯ್ದೆ ಎಂಬಂತೆ ತೋರಿಸಲಾಗಿದೆ. 1 ಕೋಟಿಗಿಂತ ಹೆಚ್ಚು ಜನಸಂಖ್ಯೆ ಇರುವ ಬೇರೆ ಯಾವುದೇ ನಗರದಲ್ಲೂ ಒಂದೇ ಪಾಲಿಕೆ ಇಲ್ಲ. ಸಣ್ಣ ಸಣ್ಣ ಪಾಲಿಕೆಗಳನ್ನು ಮಾಡಿದ್ದಾರೆ. ಬಿಬಿಎಂಪಿಯ ಸಂರಚನೆ ಬೆಂಗಳೂರು ನಗರದ ಅಭಿವೃದ್ಧಿಗೆ ಪೂರಕವಲ್ಲ. ಬಿಬಿಎಂಪಿ ವ್ಯವಸ್ಥೆಯೇ ಕಂಟಕ. ನಗರದ ಅಭಿವೃದ್ಧಿಯ ದೂರದೃಷ್ಟಿಯನ್ನೇ ಇದು ಹೊಂದಿಲ್ಲ.

- **ಬಿಬಿಎಂಪಿ ಚುನಾವಣೆ ಮುಂದೂಡಲೆಂದೇ ಕಾಯ್ದೆ ತರಲಾಗಿದೆ ಎಂಬ ಆರೋಪವಿದೆಯಲ್ಲ?**

**ಸತೀಶ ರೆಡ್ಡಿ:** ಸರ್ಕಾರಕ್ಕೆ ಈ ಉದ್ದೇಶ ಖಂಡಿತಾ ಇಲ್ಲ. ಬಿಬಿಎಂಪಿ ಆಡಳಿತವನ್ನು ಈಗ ಸಮಗ್ರವಾಗಿ ಬದಲಾವಣೆ ಮಾಡದಿದ್ದರೆ ಅಭಿವೃದ್ಧಿಯ ವೇಗ ಐದು ವರ್ಷ ಕುಂಠಿತಗೊಳ್ಳಲಿದೆ. ಹಾಗಾಗಿ ಬಿಬಿಎಂಪಿ ಕಾಯ್ದೆ ಜಾರಿಗೆ ಸರ್ಕಾರ ಮುಂದಾಗಿದೆ.

- **ಗ್ರಾಮ ಪಂಚಾಯಿತಿ ಚುನಾವಣೆ ನಡೆಯುವ ಸಂದರ್ಭದಲ್ಲಿ ಬಿಬಿಎಂಪಿ ವ್ಯಾಪ್ತಿ ವಿಸ್ತರಣೆ ತಾಂತ್ರಿಕ ಸಮಸ್ಯೆ ಸೃಷ್ಟಿಸುವುದಿಲ್ಲವೇ?**

**ಸತೀಶ ರಡ್ಡಿ:** ನಗರದ ಹೊರವಲಯದ ಅನೇಕ ಪ್ರದೇಶಗಳು ಅತ್ತ ಬಿಬಿಎಂಪಿಗೂ ಸೇರಿಲ್ಲ, ಇತ್ತ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲೂ ಇಲ್ಲ. ಎಲೆಕ್ಟ್ರಾನಿಕ್ ಸಿಟಿಯಂತಹ ಕಡೆ ಬಿಬಿಎಂಪಿ ಆಚೆಗೂ ಭಾರಿ ಬದಲಾವಣೆಗಳಾಗಿವೆ. ಕೆಲವು ಗ್ರಾಮಗಳು ನಡುಗಡ್ಡೆಗಳಂತೆ ಈ ಪ್ರದೇಶಗಳಲ್ಲಿವೆ. ಅಂತಹವುಗಳನ್ನು ಬಿಬಿಎಂಪಿ ವ್ಯಾಪ್ತಿಗೆ ಸೇರಿಸುವುದು ಅನಿವಾರ್ಯ.

**ರಿಜ್ವಾನ್:** ಹೊಸ ಪ್ರದೇಶ ಸೇರ್ಪಡೆಗೆ ವಿರೋಧವಿಲ್ಲ. ಆದರೆ, ‘ಬೃಹತ್’ ಎಂಬ ಪರಿಕಲ್ಪನೆಯೇ ಸರಿಯಲ್ಲ. ಈ ಹಿಂದೆ ಬಿಬಿಎಂಪಿಗೆ ಸೇರ್ಪಡೆಗೊಂಡ ಸೇರಿದ ನಗರ ಸಭೆ ಹಾಗೂ ಗ್ರಾಮಗಳು ಈಗಲೂ ಅಭಿವೃದ್ಧಿ ಕಂಡಿಲ್ಲ. ಹಾಗಾಗಿ ಬಿಬಿಎಂಪಿಯನ್ನು ಮೂರು ಅಥವಾ ನಾಲ್ಕು ಘಟಕಗಳನ್ನಾಗಿ ವಿಂಗಡಿಸಿ ಆ ಪ್ರದೇಶಕ್ಕೆ ಸೀಮಿತವಾದ ಪಾಲಿಕೆ ರೂಪಿಸುವುದು ಒಳ್ಳೆಯದು.

- **13 ವರ್ಷಗಳ ಹಿಂದೆ ಬಿಬಿಎಂಪಿಗೆ ಸೇರಿದ ಪ್ರದೇಶಗಳು ಈಗಲೂ ಅಭಿವೃದ್ಧಿ ಆಗಿಲ್ಲ ಎಂಬ ಆರೋಪದ ಬಗ್ಗೆ ಏನನ್ನುತ್ತೀರಿ?**

**ಸತೀಶ ರೆಡ್ಡಿ:** ಹೊಸತಾಗಿ ಸೇರ್ಪಡೆಗೊಂಡ ಪ್ರದೇಶ ಅಭಿವೃದ್ಧಿ ಆಗಿಲ್ಲ ಎಂಬುದನ್ನು ಒಪ್ಪಲಾಗದು. ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆಯನ್ನು 198ಕ್ಕೆ ಹೆಚ್ಚಿಸುವಾಗಲೂ ವಿರೋಧ ಇತ್ತು. ಕೆಲವು ಗ್ರಾಮಗಳಲ್ಲಿ ಹಿಂದೆ ಬೋರ್‌ವೆಲ್ ಹಾಕುವುದಕ್ಕೆ ಬಿಟ್ಟು ಬೇರೇನಕ್ಕೂ ದುಡ್ಡಿರಲಿಲ್ಲ. ಈಗ ನೆಲಮಂಗಲದಿಂದ ಹಿಡಿದು ಎಲೆಕ್ಟ್ರಾನಿಕ್ ಸಿಟಿ ವರೆಗೆ ಸಾಕಷ್ಟು ಅಭಿವೃದ್ಧಿ ಆಗಿಲ್ಲವೇ. ಈಗಲೂ ಅತಿ ಹೆಚ್ಚು ತೆರಿಗೆ ಬರುತ್ತಿರುವುದು ಹೊರವಲಯದ ಪ್ರದೇಶಗಳಿಂದಲೇ. ಮಹದೇವಪುರ ಕ್ಷೇತ್ರದಿಂದ ಅಥವಾ ಬೊಮ್ಮನಹಳ್ಳಿ ಕ್ಷೇತ್ರದಲ್ಲಿ ಸಂಗ್ರಹವಾಗುವಷ್ಟು ತೆರಿಗೆ ಶಿವಾಜಿನಗರದಲ್ಲಿ ಅಥವಾ ಚಾಮರಾಜಪೇಟೆ ಕ್ಷೇತ್ರದಲ್ಲಿ ಸಂಗ್ರಹವಾಗುತ್ತಿಲ್ಲ.

**ರಿಜ್ವಾನ್:** ಇವೆರಡು ಕ್ಷೇತ್ರಗಳಲ್ಲಿ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಬೆಳವಣಿಗೆಯಿಂದಾಗಿ ಅಭಿವೃದ್ಧಿ ಆಗಿವೆ. ಹೊರ ವಲಯಕ್ಕೊಂದು ಪಾಲಿಕೆ ರೂಪಿಸಿ ನೋಡಿ. ಆ ಪ್ರದೇಶ ಇನ್ನಷ್ಟು ಅಭಿವೃದ್ಧಿ ಆಗಲಿದೆ.

- **ವಲಯ ಮಟ್ಟದ ಸಮಿತಿ ನಿರ್ಣಯ ರದ್ದುಪಡಿಸುವ ಅಧಿಕಾರವನ್ನು ಮುಖ್ಯ ಆಯುಕ್ತರಿಗೆ ನೀಡಲಾಗುತ್ತಿದೆ. ಇದು ಅಧಿಕಾರ ಕೊಟ್ಟು ಕಿತ್ತುಕೊಂಡಂತೆ ಅಲ್ಲವೇ?**

**ಸತೀಶ ರೆಡ್ಡಿ:** ಶಾಸಕರು ಹಾಗೂ ಪಾಲಿಕೆ ಸದಸ್ಯರ ನಡುವೆ ತಿಕ್ಕಾಟ ಏರ್ಪಟ್ಟರೆ ಯಾರಾದರೂ ಅದನ್ನು ಬಗೆಹರಿಸಲೇಬೇಕಲ್ಲ. ಅದಕ್ಕೆ ಮುಖ್ಯ ಆಯುಕ್ತರಿಗಿಂತ ಸೂಕ್ತ ವ್ಯಕ್ತಿ ಯಾರು. ಇದು ದುರ್ಬಳಕೆ ಆಗುತ್ತದೆ ಎಂಬ ಆತಂಕ ಬೇಡ.

ಸಂವಾದವನ್ನು ವೀಕ್ಷಿಸಲು ಈ ಕೊಂಡಿ ಕ್ಲಿಕ್ಕಿಸಿ
(https://bit.ly/38rmOBY)

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

# ಬಿಬಿಎಂಪಿ ಕಾಯ್ದೆ 2020 ಜಾರಿ

**ಬೆಂಗಳೂರು:** ವಿಧಾನ ಮಂಡಲದ ಉಭಯ ಸದನಗಳಲ್ಲಿ ಇತ್ತೀಚೆಗೆ ಅಂಗೀಕಾರಗೊಂಡಿದ್ದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಸೂದೆ 2020ಕ್ಕೆ ರಾಜ್ಯಪಾಲರು ಇದೇ ಶನಿವಾರ ಅಂಕಿತ ಹಾಕಿದ್ದಾರೆ. ಸರ್ಕಾರ ರಾಜ್ಯಪತ್ರದಲ್ಲಿ ಇದನ್ನು ಸೋಮವಾರ ಪ್ರಕಟಿಸಿದ್ದು ಬಿಬಿಎಂಪಿ ಕಾಯ್ದೆ 2020 ಜಾರಿಗೆ ಬಂದಂತಾಗಿದೆ. 376 ಸೆಕ್ಷನ್‌ಗಳನ್ನು ಒಳಗೊಂಡ ಈ ಕಾಯ್ದೆ ಬಿಬಿಎಂಪಿಯ ಆಡಳಿತ ಸುಧಾರಣೆ ಹಾಗೂ ವಿಕೇಂದ್ರೀಕರಣದ ಉದ್ದೇಶವನ್ನು ಹೊಂದಿದೆ ಎಂದು ರಾಜ್ಯಪತ್ರದಲ್ಲಿ ಹೇಳಲಾಗಿದೆ.

ಆಡಳಿತದ ವಿವಿಧ ಹಂತಗಳಲ್ಲಿ ಸಾರ್ವಜನಿಕರ ಭಾಗವಹಿಸುವಿಕೆಗೆ ಈ ಕಾಯ್ದೆ ಅವಕಾಶವನ್ನು ಕಲ್ಪಿಸಲಿದೆ ಎಂದೂ ಹೇಳಲಾಗಿದೆ.

ಕನ್ನಡಪ್ರಭ

# ‘ಫುಟ್‌ಪಾತ್, ಶೌಚಗೃಹ ಬೇಕಾ? ಬೇಡಿಕೆ ಸಲ್ಲಿಸಿ’

## ಪಾಲಿಕೆಯ ಬಜೆಟಲ್ಲಿ ಆದ್ಯತೆ | ‘ಮೈ ಸಿಟಿ–ಮೈ ಬಜೆಟ್ ಅಭಿಯಾನ’ಕ್ಕೆ ಚಾಲನೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದಪಾದಚಾರಿಮಾರ್ಗಮತ್ತುಶೌಚಗೃಹಗಳ ಸಮಸ್ಯೆಗಳ ಬಗ್ಗೆ ಜನಾಭಿಪ್ರಾಯ ಪಡೆದು ಅವುಗಳ ದುರಸ್ತಿ ಹಾಗೂ ಅಭಿವೃದ್ಧಿಗೆ ಮುಂಬರುವ 2021-22ರ ಆಯವ್ಯಯದಲ್ಲಿ ಹೆಚ್ಚುಅನುದಾನಮೀಸಲಿಡಲಾಗುವುದುಎಂದು ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ್ ಪ್ರಸಾದ್ ತಿಳಿಸಿದ್ದಾರೆ.

‘ಜನಾಗ್ರಹ’ ಮತ್ತು ವಿವಿಧ ಸಂಘ ಸಂಸ್ಥೆಗಳು ನಡೆಸುತ್ತಿರುವ ‘ಮೈ ಸಿಟಿ-ಮೈ ಬಜೆಟ್’ ಅಭಿಯಾನ’ಕ್ಕೆ ಬಿಬಿಎಂಪಿ ಕೇಂದ್ರ ಕಚೇರಿ ಆವರಣದಲ್ಲಿ ಸೋಮವಾರ ಚಾಲನೆ ನೀಡಿ ಮಾತನಾಡಿದ ಅವರು, ನಗರದಲ್ಲಿ 1,600 ಶೌಚಗೃಹಗಳ ಅಗತ್ಯವಿದೆ. ಆದರೆ, ಕೇವಲ 585 ಶೌಚಗೃಹಗಳಿವೆ. ನಗರದಲ್ಲಿ 14 ಸಾವಿರ ಕಿ.ಮೀ. ರಸ್ತೆಯಿದ್ದು, ಹಲವಾರು ಕಡೆ ಪಾದಚಾರಿ ಮಾರ್ಗಗಳಿಲ್ಲ. ಹೀಗಾಗಿ, ಸಾರ್ವಜನಿಕರು ಸುರಕ್ಷಿತವಾಗಿ ನಡೆದುಕೊಂಡು ಹೋಗಲು ಸಾಧ್ಯವಾಗದೆ, ಹೆಚ್ಚಾಗಿ ಖಾಸಗಿ ವಾಹನ ಬಳಸುತ್ತಿದ್ದಾರೆ. ಎಲ್ಲೆಲ್ಲಿ ಪಾದಚಾರಿ ಮಾರ್ಗ ಮತ್ತು ಶೌಚಗೃಹಗಳ ಅಗತ್ಯವಿದೆ ಎಂಬುದನ್ನು ಜನರಿಂದ ಅಭಿಪ್ರಾಯ ಸಂಗ್ರಹಿ, ಬಜೆಟ್‌ನಲ್ಲಿ ಅನುದಾನ ಮೀಸಲಿಟ್ಟು ಅಭಿವೃದ್ಧಿ ಮಾಡಲಾಗುವುದು ಎಂದು ತಿಳಿಸಿದರು.

ಜನಾಗ್ರಹ ಹಾಗೂ ಇತರೆ ಸಂಸ್ಥೆಗಳ ಸದಸ್ಯರು ಬಸ್ ಹಾಗೂ ಬ್ಯಾಟರಿ ಚಾಲಿತ ಆಟೋಗಳ ಮೂಲಕ ಮನೆಬಾಗಿಲಿಗೆ ಹೋಗಿ ಪಾಲಿಕೆ ಬಜೆಟ್‌ನಲ್ಲಿ ಜಾರಿಗೊಳಿಸಬೇಕಾದ ಅಗತ್ಯ ಯೋಜನೆಗಳ ಅಭಿಪ್ರಾಯ ಸಂಗ್ರಹಿಸಲಿದ್ದಾರೆ. ಇಲ್ಲಿ ಸಂಗ್ರಹಿಸಿದ ಜನರ ಅಭಿಪ್ರಾಯಗಳನ್ನು ಬಜೆಟ್‌ನಲ್ಲಿ ಆದ್ಯತೆಯ ವಿಷಯಗಳನ್ನಾಗಿ ಪರಿಗಣಿಸಲಾಗುವುದು ಎಂದು ಹೇಳಿದರು.

ಘನತ್ಯಾಜ್ಯ ವಿಭಾಗದ ವಿಶೇಷ ಆಯುಕ್ತ ಡಿ.ರಂದೀಪ್ ಮಾತನಾಡಿ, ನಗರದಲ್ಲಿ ಸಾರ್ವಜನಿಕ ಶೌಚಗೃಹ ನಿರ್ಮಾಣಕ್ಕೆ ರಾಜ್ಯ ಸರ್ಕಾರ ಹಾಗೂ ಪಾಲಿಕೆಯಿಂದ ಸಾಕಷ್ಟು ಅನುದಾನ ಮೀಸಲಿಡಲಾಗಿದೆ. ಆದರೆ, ಎಲ್ಲೆಲ್ಲಿ ಹೆಚ್ಚು ಶೌಚಗೃಹ ಅಗತ್ಯವಿದೆ ಎಂದು ಪರಿಶೀಲನೆ ನಡೆಸಿ ಸೂಕ್ತ ಕ್ರಮಕೈಗೊಳ್ಳಲಾಗುವುದು ಎಂದರು.

ಈ ವೇಳೆ ಜನಾಗ್ರಹ ಸಂಸ್ಥೆಯ ಮುಖ್ಯಸ್ಥೆ ಸ್ವಪ್ನಾ ಮೊದಲಾದವರು ಉಪಸ್ಥಿತರಿದ್ದರು.



ಬಿಬಿಎಂಪಿ ಕೇಂದ್ರ ಕಚೇರಿ ಆವರಣದಲ್ಲಿ ‘ಜನಾಗ್ರಹ’ ಮತ್ತು ವಿವಿಧ ಸಂಘ ಸಂಸ್ಥೆಗಳು ನಡೆಸುತ್ತಿರುವ ‘ಮೈ ಸಿಟಿ-ಮೈ ಬಜೆಟ್’ ಅಭಿಯಾನ’ಕ್ಕೆ ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ್ ಪ್ರಸಾದ್ ಚಾಲನೆ ನೀಡಿದರು. ಘನತ್ಯಾಜ್ಯ ವಿಭಾಗದ ವಿಶೇಷ ಆಯುಕ್ತ ಡಿ.ರಂದೀಪ್, ಜನಾಗ್ರಹ ಸಂಸ್ಥೆಯ ಮುಖ್ಯಸ್ಥೆ ಸ್ವಪ್ನಾ ಇನ್ನಿತರರಿದ್ದರು.

### ವಾಟ್ಸಾಪ್ ಮೂಲಕವೂ ಅಭಿಪ್ರಾಯ ಸಂಗ್ರಹ

ನಗರದಲ್ಲಿ 2015ರಿಂದ ಈ ಅಭಿಯಾನ ಮಾಡುತ್ತಿದ್ದು, 50 ಸಾವಿರಕ್ಕೂ ಹೆಚ್ಚು ಜನ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ. ಬಜೆಟ್‌ನಲ್ಲಿ ಅಳವಡಿಸುವ ಪ್ರಮುಖ ಮಾಹಿತಿ ಸಂಗ್ರಹಿಸಿ, ಪಾಲಿಕೆಗೆ ನೀಡಲಾಗುತ್ತಿದೆ. ಈ ವರ್ಷ ಪ್ರಮುಖವಾಗಿ ಫುಟ್‌ಪಾತ್ ಹಾಗೂ ಶೌಚಗೃಹ ನಿರ್ಮಾಣಕ್ಕೆ ಹೆಚ್ಚು ಒತ್ತು ನೀಡಲಾಗಿದ್ದು, ಎಲ್ಲಿ ಅಗತ್ಯವಿದೆ ಎಂಬ ಮಾಹಿತಿ ಪಡೆಯಲಾಗುತ್ತಿದೆ. ಜ.7ರವರೆಗೆ ಅಭಿಯಾನ ನಡೆಯಲಿದೆ. ಸಾರ್ವಜನಿಕರು 702238566 ನಂಬರ್‌ಗೆ ವ್ಯಾಟ್ಸಪ್ ಮೂಲಕ ಅಭಿಪ್ರಾಯ ತಿಳಿಸಬಹುದಾಗಿದೆ.

### 64 ವಾರ್ಡ್‌ಲ್ಲಿ ಸಾರ್ವಜನಿಕ ಶೌಚಾಲಯಗಳು ಇಲ್ಲ

ಬಿಬಿಎಂಪಿ ವ್ಯಾಪ್ತಿಯ ಸಾರ್ವಜನಿಕ ಪ್ರದೇಶದಲ್ಲಿ ಮೂತ್ರ ವಿಸರ್ಜನೆ ತಡೆಗಟ್ಟುವ ಉದ್ದೇಶದಿಂದ ಜನಾಗ್ರಹ ಸಂಸ್ಥೆ ಯಲ್ಲೋ ಸ್ಪಾಟ್ ಎಂಬ ಅಭಿಯಾನವನ್ನು ನಡೆಸಿತ್ತು. ಈ ವೇಳೆ 198 ವಾರ್ಡ್‌ಗಳ ಪೈಕಿ 64 ವಾರ್ಡ್‌ಗಳಲ್ಲಿ ಹಾಗೂ ನಗರದ 11 ಪ್ರಮುಖ ಬಸ್ ನಿಲ್ದಾಣಗಳ ವ್ಯಾಪ್ತಿಯಲ್ಲಿ ಸಾರ್ವಜನಿಕ ಶೌಚಾಲಯವೇ ಇಲ್ಲ ಎಂಬ ಅಂಶ ಬೆಳಕಿಗೆ ಬಂದಿದೆ. ನಗರದಲ್ಲಿ ಒಟ್ಟು 3,316 ಸಾರ್ವಜನಿಕ ಶೌಚಾಲಯಗಳಿವೆ. ನಿಯಮಾನುಸಾರ ಎರಡು ಸಾರ್ವಜನಿಕ ಶೌಚಾಲಯದ ನಡುವಿನ ಅಂತರ ಎಳು ಕಿ.ಮೀ ಇರಬೇಕು. ಆದರೆ, ನಗರದಲ್ಲಿ ಅಂದಾಜು 24 ಕಿ.ಮೀ. ಒಂದು ಸಾರ್ವಜನಿಕ ಶೌಚಾಲಯ ಇದೆ. ಶೇ.85ರಷ್ಟು ಸಾರ್ವಜನಿಕ ಶೌಚಾಲಯಗಳು ವಾರ್ಡ್‌ಗಳ ಒಳಭಾಗದಲ್ಲಿದೆ. ಹೀಗಾಗಿ, ಹೊರಜಿಲ್ಲೆ ಮತ್ತು ರಾಜ್ಯದಿಂದ ಬರುವವರು ಸಾರ್ವಜನಿಕ ಶೌಚಾಲಯಕ್ಕೆ ಪರದಾಡಬೇಕಾದ ಪರಿಸ್ಥಿತಿ ಇದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಕನ್ನಡಪ್ರಭ

# ‘ಕೋವಿಡ್ 2ನೇ ಅಲೆ ಇಲ್ಲ, ಆತಂಕ ಬೇಡ’

## ಆದರೆ ಕಡ್ಡಾಯವಾಗಿ ಮುನ್ನೆಚ್ಚರಿಕೆ ವಹಿಸಬೇಕು: ಮಂಜುನಾಥ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದಲ್ಲಿ ಕೊರೋನಾ ಸೋಂಕಿನ ಎರಡನೇ ಅಲೆ ಇಲ್ಲ. ಬ್ರಿಟನ್‌ನಲ್ಲಿ ಕೊರೋನಾ ಹೊಸ ಪ್ರಭೇದ ಪತ್ತೆಯಾದ ರೀತಿಯ ಯಾವುದೇ ಪ್ರಕರಣಗಳು ನಗರದಲ್ಲಿ ವರದಿಯಾಗಿಲ್ಲ. ಹಾಗಾಗಿ, ನಾಗರಿಕರು ಆತಂಕಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ, ಆದರೆ ಕಡ್ಡಾಯವಾಗಿ ಮುನ್ನೆಚ್ಚರಿಕೆ ಕ್ರಮ ಪಾಲಿಸಬೇಕು ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ ಪ್ರಸಾದ್ ಹೇಳಿದ್ದಾರೆ.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಗರದಲ್ಲಿ ಕಳೆದ ಒಂದು ವಾರದಿಂದ ಸೋಂಕಿನ ಪ್ರಕರಣಗಳು ಹೆಚ್ಚಾಗುತ್ತಿಲ್ಲ. ನವೆಂಬರ್‌ನಲ್ಲಿ ಸೋಂಕಿನಿಂದಾಗಿ 271 ಜನ ಮೃತಪಟ್ಟಿದ್ದರು. ಈ ತಿಂಗಳು 130 ಮೃತಪಟ್ಟಿದ್ದಾರೆ. ಆದರೆ, ಕೋವಿಡ್ ಡೆತ್ ಅನಾಲಿಸಸ್ ಮತ್ತು ಸೋಂಕು ಪರೀಕ್ಷೆಯಲ್ಲಿ ಯಾವುದೇ ವ್ಯತ್ಯಾಸ ಆಗಿಲ್ಲ. ಸಿರೊಲಾಜಿಕಲ್ ವರದಿಯ ಅನ್ವಯ ಎಲ್ಲೆಲ್ಲಿ ಸೋಂಕು ಹೆಚ್ಚಾಗುವ ಆತಂಕ ಇದೆಯೋ ಅಲ್ಲೆಲ್ಲ ಹೆಚ್ಚು ಪರೀಕ್ಷೆ ಮಾಡಲಾಗುತ್ತಿದೆ ಎಂದು ಹೇಳಿದರು.

### ಅಪಾರ್ಟ್‌ಮೆಂಟ್‌ಗೂ ಹೊಸ ವರ್ಷಾಚರಣೆ ನಿಯಮ ಅನ್ವಯ

ನಗರದಲ್ಲಿ ಕ್ರಿಸ್‌ಮಸ್ ಮತ್ತು ಹೊಸ ವರ್ಷಾಚರಣೆ ಸಂದರ್ಭದಲ್ಲಿ ಹೆಚ್ಚು ಜನ ಸೇರದೆ ಸರಳವಾಗಿ ಹೊಸ ವರ್ಷ ಆಚರಣೆ ಮಾಡಬೇಕು ಎನ್ನುವ ನಿಯಮ ನಗರದಲ್ಲಿರುವ ಅಪಾರ್ಟ್‌ಮೆಂಟ್‌ಗಳಿಗೂ ಅನ್ವಯಿಸಲಿದ್ದು, ನಿಯಮ ಉಲ್ಲಂಘನೆ ಮಾಡಿದರೆ ಕ್ರಮ ಕೈಗೊಳ್ಳಲಾಗುವುದು ಎಂದು ಆಯುಕ್ತ ಮಂಜುನಾಥ್ ಪ್ರಸಾದ್ ಎಚ್ಚರಿಸಿದ್ದಾರೆ. ನಗರದ ಹೋಟೆಲ್, ಪಬ್ ಹಾಗೂ ರೆಸ್ಟೋರೆಂಟ್‌ಗಳಲ್ಲಿ ಹೆಚ್ಚು ಜನ ಸೇರುವಂತಿಲ್ಲ. ಸಾರ್ವಜನಿಕ ಪ್ರದೇಶದಲ್ಲಿ ಹೊಸ ವರ್ಷ ಆಚರಣೆ ಮಾಡುವಂತಿಲ್ಲ. ನಿಯಮ ಪಾಲನೆ ಮೇಲ್ವಿಚಾರಣೆಗೆ 440 ಜನ ಮಾರ್ಷಲ್‌ಗಳು ಕಾರ್ಯನಿರ್ವಹಿಸಲಿದ್ದಾರೆ ಎಂದು ತಿಳಿಸಿದರು.

ಕನ್ನಡಪ್ರಭ

# 6 ತಿಂಗಳ ನಂತರ ಅತ್ಯಂತ ಕಡಿಮೆ ಜನರಿಗೆ ಸೋಂಕು

## ನಿನ್ನೆ 363 ಮಂದಿಗೆ ಕೊರೋನಾ | 709 ಮಂದಿ ಗುಣ

**ಬೆಂಗಳೂರು:** ನಗರದಲ್ಲಿ ಆರು ತಿಂಗಳ ನಂತರ ಕೊರೋನಾ ಸೋಂಕಿನ ಪ್ರಕರಣಗಳು ಅತ್ಯಂತ ಕಡಿಮೆ ದಾಖಲಾಗಿದೆ. ಸೋಮವಾರ 363 ಜನರಲ್ಲಿ ಸೋಂಕು ಕಾಣಿಸಿಕೊಂಡಿದ್ದು, 709 ಮಂದಿ ಗುಣಮುಖರಾಗಿದ್ದು, ಐದು ಮಂದಿ ಮೃತಪಟ್ಟಿದ್ದಾರೆ.

ಜೂನ್ 27ರಂದು 596 ಪ್ರಕರಣ ಪತ್ತೆಯಾಗಿತ್ತು. ನಂತರದ ದಿನಗಳಲ್ಲಿ ಪ್ರಕರಣಗಳ ಸಂಖ್ಯೆ ಸಾವಿರ ದಾಟಿತ್ತು. ನಂತರ ಡಿ.14 ರಂದು 369 ಜನರಲ್ಲಿ ಸೋಂಕು ಕಾಣಿಸಿಕೊಂಡಿತ್ತು. ಇದಾದ ನಂತರದ ಅತಿ ಕಡಿಮೆ ಸೋಂಕಿನ ಪ್ರಕರಣ ಸೋಮವಾರ ದಾಖಲಾಗಿದೆ.

ನಗರದಲ್ಲಿ ಸದ್ಯ ಈವರೆಗಿನ ಸೋಂಕಿತರ ಸಂಖ್ಯೆ 3,83,231ಕ್ಕೆ ಏರಿಕೆಯಾಗಿದೆ. ಗುಣಮುಖರ ಸಂಖ್ಯೆ 3,69,701ಕ್ಕೆ ತಲುಪಿದೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ.

ಐದು ಮಂದಿ ಸಾವು: ಸೋಮವಾರ ಐದು ಮಂದಿ ಮೃತಪಡುವುದರೊಂದಿಗೆ ಈವರೆಗೆ 4,278 ಜನರು ಸಾವಿಗೀಡಾಗಿದ್ದಾರೆ. ಸದ್ಯ 9,256 ಸಕ್ರಿಯ ಪ್ರಕರಣಗಳಿದ್ದು, ವಿವಿಧ ಆಸ್ಪತ್ರೆ, ಆರೈಕೆ ಕೇಂದ್ರ ಹಾಗೂ ಹೋಂ ಐಸೋಲೇಷನ್‌ನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. 102 ಸೋಂಕಿತರ ಆರೋಗ್ಯ ಪರಿಸ್ಥಿತಿ ಗಂಭೀರವಾಗಿದ್ದು, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

# ವೀರಣ್ಣಪಾಳ್ಯ ಮೇಲ್ಸೇತುವೆ ಬಳಿ ಸಂಚಾರ ಬದಲಾವಣೆ

**ಬೆಂಗಳೂರು:** ವೈಟ್‌ಟಾಪಿಂಗ್ ಕಾಮಗಾರಿ ಹಿನ್ನೆಲೆಯಲ್ಲಿ ಹೆಬ್ಬಾಳದಿಂದ ನಾಗವಾರ ಕಡೆ ಹೋಗುವ ರಿಂಗ್ ರಸ್ತೆ ಮಾರ್ಗದ ವೀರಣ್ಣಪಾಳ್ಯ ಮೇಲ್ಸೇತುವೆಯ ಭಾಗದಲ್ಲಿ ವಾಹನ ಸಂಚಾರ ಮಾರ್ಗ ಬದಲಾವಣೆ ಮಾಡಲಾಗಿದೆ. ಮೊದಲ ಹಂತದಲ್ಲಿ ಹೆಬ್ಬಾಳದಿಂದ ನಾಗವಾರ ಕಡೆ ಹೋಗುವ ಮೇಲ್ಸೇತುವೆ ಒಂದು ಪಥದಲ್ಲಿ ಡಿ.22 ರಿಂದ ಕಾಮಗಾರಿ ನಡೆಸಲಾಗುತ್ತದೆ. ಈ ಮಾರ್ಗದಲ್ಲಿ ಸರ್ವೀಸ್ ರಸ್ತೆಯಲ್ಲಿ ಸಾಗಲು ವ್ಯವಸ್ಥೆ ಮಾಡಲಾಗಿದೆ.

ಕನ್ನಡಪ್ರಭ

# ಬಿಬಿಎಂಪಿ ವಿಧೇಯಕಕ್ಕೆ ರಾಜ್ಯಪಾಲರ ಒಪ್ಪಿಗೆ

**ಬೆಂಗಳೂರು:** ಬಿಬಿಎಂಪಿ ವಿಧೇಯಕ 2020ಕ್ಕೆ ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸೋಮವಾರ ಸರ್ಕಾರ ರಾಜ್ಯಪತ್ರ ಹೊರಡಿಸಿದೆ. ಕರ್ನಾಟಕ ಅಧಿನಿಯಮ ಸಂಖ್ಯೆ 53 ಎಂದು ಅಧಿಕೃತ ಕಾಯ್ದೆಯನ್ನಾಗಿ ಸರ್ಕಾರ ಜಾರಿಗೊಳಿಸಿದೆ. ಕಳೆದ ವಾರವಷ್ಟೇ ಉಭಯ ಸದನದಲ್ಲಿ ಒಪ್ಪಿಗೆ ಪಡೆದು ರಾಜ್ಯಪಾಲರ ಅಂಗೀಕಾರಕ್ಕೆ ಮಸೂದೆಯನ್ನು ಕಳುಹಿಸಲಾಗಿತ್ತು. ಡಿ.19ರಂದು ರಾಜ್ಯಪಾಲರ ಒಪ್ಪಿಗೆ ಸಿಕ್ಕಿದ್ದು, ಸೋಮವಾರ ಹೊಸ ವಿಧೇಯಕ ಜಾರಿಗೊಳಿಸಿದೆ. ವಿಕೇಂದ್ರೀಕರಣ ಸುಧಾರಣೆ, ಪಾಲಿಕೆ ಆಡಳಿತದ ವಿವಿಧ ಹಂತಗಳನ್ನು ಸಾರ್ವಜನಿಕರ ಭಾಗವಹಿಸುವಿಕೆ ದೃಷ್ಟಿಕೋನದಿಂದ ಅಧಿನಿಯಮ ಜಾರಿಗೊಳಿಸಲಾಗಿದೆ. 243 ವಾರ್ಡ್‌ಗಳ ರಚನೆ, ಮೇಯರ್ ಆಡಳಿತಾಧಿಕಾರ ಹೆಚ್ಚಳ, ವಲಯಗಳಲ್ಲಿ ಸಮಿತಿ ರಚನೆ ಎಲ್ಲವೂ ಹೆಚ್ಚಳ ಮಾಡಲು ಬೇಕಾದ ಮಾರ್ಗಗಳು ತೆರೆದುಕೊಂಡಿವೆ..

VK
ವಿಜಯ ಕರ್ನಾಟಕ

### ಫುಟ್‌ಪಾತ್, ಸಾರ್ವಜನಿಕ ಶೌಚಾಲಯ ನಿರ್ಮಾಣಕ್ಕೆ ಅಭಿಪ್ರಾಯ ಸಂಗ್ರಹ

# ಮೈ ಸಿಟಿ ಮೈ ಬಜೆಟ್ ಅಭಿಯಾನಕ್ಕೆ ಚಾಲನೆ

■ **ವಿಕ ಸುದ್ದಿಲೋಕ** ಬೆಂಗಳೂರು

ಬಿಬಿಎಂಪಿ ವ್ಯಾಪ್ತಿಯಲ್ಲಿ 14 ಸಾವಿರ ಕಿ.ಮೀ. ಉದ್ದದ ರಸ್ತೆ ಮಾರ್ಗವಿದ್ದು, ಕೆಲವೆಡೆ ಪಾದಚಾರಿ ಮಾರ್ಗವನ್ನೇ ನಿರ್ಮಿಸಿಲ್ಲ. ಇನ್ನು ಕೆಲವೊಂದು ರಸ್ತೆಗಳಲ್ಲಿ ಫುಟ್‌ಪಾತ್‌ಗಳಿದ್ದರೂ ಸುರಕ್ಷಿತವಾಗಿ ನಡೆಯಲು ಸಾಧ್ಯವಾಗದ ಪರಿಸ್ಥಿತಿ ಇದೆ. ಈ ಬಗ್ಗೆ ಸಾರ್ವಜನಿಕರಿಂದ ಅಭಿಪ್ರಾಯ ಸಂಗ್ರಹಿಸಿ, ದುರಸ್ತಿ ಮತ್ತು ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಆಯುಕ್ತ ಎನ್.ಮಂಜುನಾಥ ಪ್ರಸಾದ್ ತಿಳಿಸಿದರು.

ಸಾರ್ವಜನಿಕರಿಂದ ಬಜೆಟ್, ಶೌಚಾಲಯ, ಪಾದಚಾರಿ ಮಾರ್ಗಗಳ ಬಗ್ಗೆ ಸಲಹೆಗಳನ್ನು ಸಂಗ್ರಹಿಸಲು ಜನಾಗ್ರಹ ಸಂಸ್ಥೆಯು ಬಿಬಿಎಂಪಿ ಸಹಯೋಗದಲ್ಲಿ ಆರಂಭಿಸಿರುವ 'ಮೈ ಸಿಟಿ ಮೈ ಬಜೆಟ್ ಬಸ್-2021-22' ಅಭಿಯಾನಕ್ಕೆ ಸೋಮವಾರ ಚಾಲನೆ ನೀಡಿ ಅವರು ಮಾತನಾಡಿದರು. ವಿಶೇಷ ವಿನ್ಯಾಸದ ಬಜೆಟ್ ಬಸ್ ಮತ್ತು 7 ಎಲೆಕ್ಟ್ರಿಕ್ ಆಟೊಗಳ ಮೂಲಕ ಸಲಹೆ ಸ್ವೀಕರಿಸಲಾಗುತ್ತಿದೆ.

''ಪಾದಚಾರಿ ಮಾರ್ಗಗಳಲ್ಲಿ ಹಾಕಿರುವ ಸ್ಲ್ಯಾಬ್‌ಗಳು ಹಾಳಾಗಿವೆ. ಇನ್ನು ಕೆಲವೆಡೆ ತುಂಬಾ ಕಿರಿದಾಗಿದ್ದು, ಜನರು ಓಡಾಡಲಾಗದಂತಹ ಪರಿಸ್ಥಿತಿ ಇದೆ. ನಗರದಲ್ಲಿ ಉತ್ತಮ ಹವಾಮಾನವಿದ್ದು, ಒಂದು ಕಡೆಯಿಂದ ಮತ್ತೊಂದು ಕಡೆಗೆ ಸುಲಭವಾಗಿ ನಡೆದು ಹೋಗಬಹುದು. ಫುಟ್‌ಪಾತ್‌ಗಳು ಸುಸ್ಥಿತಿಯಲ್ಲಿದ್ದರೆ




ಮೈ ಸಿಟಿ ಮೈ ಬಜೆಟ್ ಅಭಿಯಾನಕ್ಕೆ ಬಿಬಿಎಂಪಿ ಆಯುಕ್ತ ಎನ್. ಮುಂಜುನಾಥ ಪ್ರಸಾದ್ ಚಾಲನೆ ನೀಡಿದರು.

## ಜನಾಗ್ರಹ, ಬಿಬಿಎಂಪಿ ಸಹಯೋಗದಲ್ಲಿ ಆರಂಭ

ಬಹುತೇಕರು ಖಾಸಗಿ ವಾಹನ ಅಥವಾ ಬಸ್‌ಗಳನ್ನು ಬಳಸುವುದಿಲ್ಲ. ಬದಲಿಗೆ ಪಾದಚಾರಿ ಮಾರ್ಗಗಳ ಮೂಲಕವೇ ಸಂಚರಿಸುತ್ತಾರೆ,'' ಎಂದು ಹೇಳಿದರು.

''ಸುಸಜ್ಜಿತ ಪಾದಚಾರಿ ಮಾರ್ಗಗಳನ್ನು ನಿರ್ಮಿಸಿದರೆ, ಹೆಚ್ಚಿನ ಜನರು ಫುಟ್‌ಪಾತ್‌ಗಳಲ್ಲಿ ನಡೆದಾಡುತ್ತಾರೆ. ಆದರೆ, ನಗರದಲ್ಲಿ ಫುಟ್‌ಪಾತ್‌ಗಳು ಹಾಳಾಗಿವೆ.

## ವಿಶೇಷ ಬಸ್, ಆಟೊ ಮೂಲಕ ಸಲಹೆ ಸ್ವೀಕಾರ

ಪಾದಚಾರಿ ಮಾರ್ಗಗಳಲ್ಲೇ ಟ್ರಾನ್ಸ್‌ಫಾರ್ಮರ್‌ಗಳು, ಕಸ ಹಾಕಿರುವುದರಿಂದ ಜನರು ಓಡಾಡಲು ಆಗುತ್ತಿಲ್ಲ. ಇದನ್ನೆಲ್ಲಾ ಸರಿಪಡಿಸಬೇಕಿದೆ. ಈ ಹಿನ್ನೆಲೆಯಲ್ಲಿ ಉತ್ತಮ ಪಾದಚಾರಿ ಮಾರ್ಗಗಳನ್ನು ನಿರ್ಮಿಸುವ ಅಗತ್ಯವಿದೆ. ಜನರಿಂದ ಸೂಕ್ತ ಸಲಹೆ, ಸೂಚನೆಗಳನ್ನು ಪಡೆದು ಪಾದಚಾರಿ ಮಾರ್ಗಗಳ ಅಭಿವೃದ್ಧಿ ಮತ್ತು ದುರಸ್ತಿಗೆ ಬಜೆಟ್‌ನಲ್ಲಿ ಅನುದಾನ ಮೀಸಲಿಡಲಾಗುವುದು,'' ಎಂದರು.

''ನಗರದಲ್ಲಿ ಸುಮಾರು 585 ಸಾರ್ವಜನಿಕ ಶೌಚಾಲಯಗಳಿವೆ. ಆದರೆ, ಮಾನದಂಡಗಳ ಪ್ರಕಾರ 1600 ಸಾರ್ವಜನಿಕ ಶೌಚಾಲಯಗಳು ಇರಬೇಕಿದೆ. ಹೀಗಾಗಿ, ಶೌಚಾಲಯಗಳ ಕೊರತೆ ಇದೆ. ಕೆಲ ಶೌಚಾಲಯಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡದ ಹಿನ್ನೆಲೆಯಲ್ಲಿ ಬಳಕೆ ಮಾಡದಂತಹ ಪರಿಸ್ಥಿತಿ ಇದೆ. ಸಾರ್ವಜನಿಕ ಪ್ರದೇಶಗಳಲ್ಲಿನ ಮೂತ್ರ ವಿಸರ್ಜನೆ ಮಾಡುವ ಎಲ್ಲೋ ಸ್ಪಾಟ್‌ಗಳನ್ನು ಗುರುತಿಸಿ, ನಿರ್ಮೂಲನೆ ಮಾಡಬೇಕಿದೆ. ಹಾಗಾಗಿ, ಎಲ್ಲೆಲ್ಲಿ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಾಣ ಮಾಡಬೇಕು ಎಂಬುದರ ಬಗ್ಗೆ ಜನರಿಂದಲೇ ಅಭಿಪ್ರಾಯ ಪಡೆಯಲಾಗುವುದು,'' ಎಂದು ಹೇಳಿದರು.

## ಜ. 7ರವರೆಗೆ ಅಭಿಯಾನ

''ಮೈ ಸಿಟಿ ಮೈ ಬಜೆಟ್ ಅಭಿಯಾನವು ಜ. 7ರವರೆಗೆ ನಡೆಯಲಿದೆ. ಸಾರ್ವಜನಿಕರು ಪಾದಚಾರಿ ಮಾರ್ಗ, ಶೌಚಾಲಯಗಳ ಬಗ್ಗೆ ನೀಡಿದ ಸಲಹೆಗಳನ್ನು ಆಧರಿಸಿ 2021-22ನೇ ಸಾಲಿನ ಆಯವ್ಯಯದಲ್ಲಿ ಹೆಚ್ಚಿನ ಅನುದಾನ ಒದಗಿಸಲಾಗುವುದು. ಅಗತ್ಯವಿರುವೆಡೆ ತಕ್ಷಣ ಪಾದಚಾರಿ ಮಾರ್ಗಗಳ ಅಭಿವೃದ್ಧಿ ಹಾಗೂ ಶೌಚಾಲಯಗಳ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು. ಜನರು ವೆಬ್‌ಸೈಟ್ ಮತ್ತು ವಾಟ್ಸ್‌ಆಪ್ ಮೂಲಕವೂ ಅಭಿಪ್ರಾಯಗಳನ್ನು ತಿಳಿಸಬಹುದು,'' ಎಂದು ತಿಳಿಸಿದರು.

ವಿಶೇಷ ಆಯುಕ್ತ ಡಿ.ರಂದೀಪ್ ಮಾತನಾಡಿ, ''ಮೈ ಸಿಟಿ ಮೈ ಬಜೆಟ್ ಅಭಿಯಾನದಲ್ಲಿ ಸಾರ್ವಜನಿಕರಿಂದ ಅಭಿಪ್ರಾಯಗಳನ್ನು ಪಡೆದು, ಅದನ್ನು ಆಯವ್ಯಯದಲ್ಲಿ ಸೇರಿಸಲಾಗುವುದು. ಈ ಸಲ ಪಾದಚಾರಿ ಮಾರ್ಗ ಹಾಗೂ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸುವ ಸಲುವಾಗಿ ಅಭಿಯಾನ ಹಮ್ಮಿಕೊಳ್ಳಲಾಗಿದೆ. ನಗರದಲ್ಲಿ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಲು ರಾಜ್ಯ ಸರಕಾರ ಮತ್ತು ಪಾಲಿಕೆಯಿಂದ ಸಾಕಷ್ಟು ಅನುದಾನ ಮೀಸಲಿಡಲಾಗಿದೆ. ಎಲ್ಲಿ ಶೌಚಾಲಯಗಳನ್ನು ನಿರ್ಮಿಸಬೇಕು, ಎಲ್ಲಿ ಅಗತ್ಯವಿದೆ ಎಂಬುದನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು,'' ಎಂದು ಹೇಳಿದರು.

ವಿಜಯವಾಣಿ
ಕನ್ನಡಿಗರ ಧ್ವನಿ

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ

# ಕಟ್ಟಡ ಪರವಾನಗಿ ನೀಡಲು ಸತಾಯಿಸುವ ಬಿಬಿಎಂಪಿ!

■ ಎಸ್.ಎನ್. ಶಾಸ್ತ್ರಿ ಯಶವಂತಪುರ

ಬಿಬಿಎಂಪಿಯು ಕಟ್ಟಡ ನಿರ್ಮಾಣಕ್ಕಾಗಿ ನಕ್ಷೆ ಪರವಾನಗಿ ಪಡೆಯುವ ಸಾರ್ವಜನಿಕರಿಗೆ ಗಾಯದ ಮೇಲೆ ಬರೆ ಎಳೆದಂತೆ ಶೇ.25 ಶುಲ್ಕ ಹೆಚ್ಚಿಸಿತು. ಆದರೆ, ಶುಲ್ಕ ಪಡೆದ ಬಳಿಕ, ಕಟ್ಟಡ ನಿರ್ಮಿಸಲು ಸಕಾಲದಲ್ಲಿ ಪರವಾನಗಿ ನೀಡದೆ ಸತಾಯಿಸುತ್ತಿದೆ. ಆರ್.ಆರ್. ನಗರ ವಲಯ ವ್ಯಾಪ್ತಿಯಲ್ಲಿರುವ ಯಶವಂತಪುರದ ಐದು ವಾರ್ಡ್‌ಗಳಲ್ಲಿ ನೂರಾರು ಕಡತಗಳು ಬಾಕಿ ಉಳಿದಿದ್ದು, ಇವುಗಳ ವಿಲೇವಾರಿಗೆ ಪಾಲಿಕೆ ತ್ವರಿತ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಸಾರ್ವಜನಿಕರು ದೂರಿದ್ದಾರೆ.

» **ನಕ್ಷೆಗೆ ಅನುಮತಿ ನೀಡಲು ವಿಳಂಬ**

» **ಸಮಸ್ಯೆ ಹೇಳಿ ಸಾಗ ಹಾಕುತ್ತಿರುವ ಅಧಿಕಾರಿಗಳು**

ಹೊಸ ನಿಯಮದ ಪ್ರಕಾರ, ಹಣ ಪಾವತಿಸಿದ ತಕ್ಷಣ ನಕ್ಷೆ ಮಂಜೂರು ಮಾಡಿ ಕೊಡಬೇಕಿದ್ದ ಪಾಲಿಕೆ ಅಧಿಕಾರಿಗಳು ತಿಂಗಳುಗಟ್ಟಲೆ ಕಾಯಿಸುತ್ತಿದ್ದಾರೆ. ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ತಂತ್ರಾಂಶದಲ್ಲಿನ ನ್ಯೂನತೆ ಮತ್ತಿತರ ಸಬೂಬುಗಳನ್ನು ಹೇಳುತ್ತಿದ್ದಾರೆ. 'ಕೇಂದ್ರ ಕಛೇರಿಯಲ್ಲಿ ವಿಚಾರಿಸಿ' ಎಂದು ಸಾಗಹಾಕುತ್ತಿದ್ದಾರೆ. ಜನರು ಕಚೇರಿಗೆ ಅಲೆಯುವುದನ್ನು ತಪ್ಪಿಸಲಿಕ್ಕಾಗಿಯೇ ಆನ್‌ಲೈನ್ ಸೇವೆಗೆ ಮೊರೆಹೋದವರು, ಮತ್ತೆ ಹಳೇ ದಾರಿಯತ್ತಲೇ ಬೊಟ್ಟು ಮಾಡುತ್ತಿದ್ದಾರೆ!

ಕಟ್ಟಡ ನಿರ್ಮಾಣ ಪರವಾನಗಿ ಮಂಜೂರಾತಿಗೆ ಲಕ್ಷಾಂತರ ಶುಲ್ಕ ವಸೂಲಿ ಮಾಡುವ ಪಾಲಿಕೆ ಅನುಸರಿಸುತ್ತಿರುವ ವಿಳಂಬ ನೀತಿಯಿಂದ ಜನರು ಹಲವು ಸಮಸ್ಯೆಗಳಿಗೆ ಸಿಲುಕುತ್ತಿದ್ದಾರೆ. ಕಟ್ಟಡ ನಿರ್ಮಿಸಲು ಬ್ಯಾಂಕ್ ಸಾಲದ ಹೊರೆ ಒಂದೆಡೆಯಾದರೆ, ಪಾಲಿಕೆಯ ಉದಾಸೀನತೆ ಮತ್ತೊಂದೆಡೆ. 'ಬಿಬಿಎಂಪಿಯಲ್ಲಿ ಹಣದ ಕೊರತೆ ಇದೆ ಎನ್ನುವ ಅಧಿಕಾರಿಗಳಿಗೆ ನಕ್ಷೆ ಮಂಜೂರಾತಿಯಿಂದ ಕೋಟ್ಯಂತರ ರೂ. ಆದಾಯ ಬರುವುದರ ಬಗ್ಗೆ ಗಮನವಿಲ್ಲವೇಕೆ? ಕಚೇರಿಗಳಿಗೆ ಭೇಟಿ ನೀಡಬೇಕು ಎನ್ನುವುದಾದರೆ ಆನ್‌ಲೈನ್ ವ್ಯವಸ್ಥೆ ಮಾಡಿದ್ದಾದರೂ ಯಾಕೆ ಎಂದು ಸಾರ್ವಜನಿಕರು ದೂರಿದ್ದಾರೆ.


ಸಾಂದರ್ಭಿಕ ಚಿತ್ರ

**ಅಯ್ಯೋ! ಪ್ರಾಬ್ಲಂ ಕಣ್ರೀ...**

ನಮ್ಮ ವಿಳಾಸ: ಸಂಪಾದಕರು, ಅಯ್ಯೋ ಪ್ರಾಬ್ಲಂ ಕಣ್ರೀ ವಿಭಾಗ, ವಿಜಯವಾಣಿ, ನಂ. 24, ಶ್ರೀ ಸಾಯಿರಾಂ ಟವರ್ಸ್, 5ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.
email: vijayavaniramnagar@gmail.com
ದೂ: 88844 31914
ಫ್ಯಾಕ್ಸ್: 08026257464
(ವರದಿಗಾರರ ವಿಭಾಗ)

ಸಕಾಲದಲ್ಲಿ ಹಣ ಪಾವತಿಸಿಲ್ಲ ಎಂಬ ಏಕೈಕ ಕಾರಣಕ್ಕೆ ಬಡ್ಡಿ ಹಾಕುವ ಪಾಲಿಕೆ, ಈಗಾಗಲೇ ಕಟ್ಟಡ ನಕ್ಷೆ ಮಂಜೂರಾತಿಗೆ ಅರ್ಜಿ ಸಲ್ಲಿಸಿ ಶುಲ್ಕವನ್ನು ಪಾವತಿಸಿ ತಿಂಗಳುಗಳೇ ಕಳೆದರೂ ಸ್ಪಂದಿಸದೆ ನಮ್ಮನ್ನು ಸುಖಾಸುಮ್ಮನೆ ಅಲೆದಾಡಿಸುತ್ತಿದೆ. ಇದಕ್ಕೆಲ್ಲ ಯಾರು ಹೊಣೆ?

**| ಲಕ್ಷ್ಮೀಪತಿ**
ನಕ್ಷೆ ಮಂಜೂರಾತಿಗೆ ಅರ್ಜಿ ಸಲ್ಲಿಸಿದವರು

ಹಲವಾರು ಕಷ್ಟಗಳ ನಂತರ ಕಟ್ಟಡ ನಿರ್ಮಾಣಕ್ಕೆಂದು ಬ್ಯಾಂಕ್‌ನಿಂದ ಸಾಲ ಮಂಜೂರು ಮಾಡಿಸಿಕೊಂಡು ತಿಂಗಳುಗಳೇ ಕಳೆದಿವೆ. ಆದರೆ ಸ್ಥಳೀಯ ಪಾಲಿಕೆ ವತಿಯಿಂದ ನಕ್ಷೆ ಮಂಜೂರು ಹಾಗೂ ಪರವಾನಗಿಯನ್ನು ಪಡೆದುಕೊಳ್ಳದೆ ಕಟ್ಟಡ ನಿರ್ಮಾಣಕ್ಕೆ ಕೈ ಹಾಕುವಂತಿಲ್ಲ. ಇತ್ತ ಕಟ್ಟಡದ ಕೆಲಸವು ಪ್ರಾರಂಭಿಸುವಂತಿಲ್ಲ, ಅತ್ತ ಬ್ಯಾಂಕ್‌ನವರಿಗೆ ಸಾಲದ ಬಡ್ಡಿ ಕಟ್ಟುವುದರಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ.

**| ಎಂ. ಮುನಿರತ್ನಂ**
ಸ್ಥಳೀಯ ನಿವಾಸಿ

## ಅಧಿಕಾರಿಗಳ ಅಸಹಾಯಕತೆ

ತಂತ್ರಾಂಶದಲ್ಲಿನ ನ್ಯೂನತೆಗಳ ಬಗ್ಗೆ ಪಾಲಿಕೆ ಕೇಂದ್ರ ಕಚೇರಿಗೆ ಮನವರಿಕೆ ಮಾಡಿಕೊಟ್ಟಿದ್ದೇವೆ. ಆದರೆ, 'ವ್ಯವಸ್ಥಿತ ತಂತ್ರಾಂಶ ಸಿದ್ಧಗೊಳ್ಳುತ್ತಿರುವುದರಿಂದ ವಿಳಂಬವಾಗುತ್ತಿದೆ' ಎಂಬ ಉತ್ತರ ಬರುತ್ತಿದೆ. ಹೀಗಾಗಿ, ಕಟ್ಟಡ ನಿರ್ಮಾಣ ಮಾಲೀಕರಿಗೆ ಸಬೂಬು ಹೇಳಬೇಕಾದಂತ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಪಾಲಿಕೆ ವಲಯ ಕಚೇರಿಯ ಅಧಿಕಾರಿಯೊಬ್ಬರು ಅಸಹಾಯಕತೆ ತೋಡಿಕೊಂಡಿದ್ದಾರೆ.

ವಿಜಯವಾಣಿ
ಕನ್ನಡಿಗರ ಧ್ವನಿ

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ

## ಮೈ ಸಿಟಿ – ಮೈ ಬಜೆಟ್ ಅಭಿಯಾನ ಆರಂಭ | ಆಯುಕ್ತ ಮಂಜುನಾಥ ಪ್ರಸಾದ್ ಚಾಲನೆ

# ಫುಟ್‌ಪಾತ್, ಶೌಚಗೃಹ ಸ್ಥಾಪನೆಗೆ ಜನಾಭಿಪ್ರಾಯ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಪಾದಚಾರಿ ಮಾರ್ಗ ಮತ್ತು ಶೌಚಗೃಹಗಳ ಸಮಸ್ಯೆಗಳ ಬಗ್ಗೆ ಜನರಿಂದ ಅಭಿಪ್ರಾಯ ಪಡೆದುಕೊಂಡು ಅವುಗಳ ದುರಸ್ತಿ ಮತ್ತು ಅಭಿವೃದ್ಧಿಗೆ ಮುಂದಿನ ಆಯವ್ಯಯದಲ್ಲಿ ಹೆಚ್ಚು ಅನುದಾನ ಮೀಸಲಿಡಲಾಗುವುದು ಎಂದು ಬಿಬಿಎಂಪಿ ಆಯುಕ್ತ ಎನ್. ಮಂಜುನಾಥಪ್ರಸಾದ್ ತಿಳಿಸಿದ್ದಾರೆ.

ಜನಾಗ್ರಹ ಮತ್ತು ವಿವಿಧ ಸಂಘ ಸಂಸ್ಥೆಗಳು ನಡೆಸುತ್ತಿರುವ 'ಮೈ ಸಿಟಿ -ಮೈ ಬಜೆಟ್ ಅಭಿಯಾನ'ಕ್ಕೆ ಪಾಲಿಕೆ ಕೇಂದ್ರ ಕಚೇರಿ ಆವರಣದಲ್ಲಿ ಸೋಮವಾರ ಚಾಲನೆ ನೀಡಿದರು. ಸಂಸ್ಥೆಗಳ ಸದಸ್ಯರು ಬಸ್ ಹಾಗೂ ಬ್ಯಾಟರಿಚಾಲಿತ ಆಟೋಗಳ ಮೂಲಕ, ಜನರ ಮನೆ ಬಾಗಿಲಿಗೆ ಹೋಗಿ ಪಾಲಿಕೆ ಬಜೆಟ್‌ನಲ್ಲಿ ಜಾರಿಗೊಳಿಸಬೇಕಾದ ಅಗತ್ಯ ಯೋಜನೆಗಳ ಅಭಿಪ್ರಾಯ ಸಂಗ್ರಹಿಸಲಿದ್ದಾರೆ. ಇಲ್ಲಿ ಸಂಗ್ರಹಿಸಿದ ಅಭಿಪ್ರಾಯಗಳನ್ನು ಬಜೆಟ್‌ನಲ್ಲಿ ಆದ್ಯತೆ ವಿಷಯಗಳನ್ನಾಗಿ ಪರಿಗಣಿಸಲಾಗುವುದು ಎಂದರು.

**» ಬಜೆಟ್‌ನಲ್ಲಿ ಹೆಚ್ಚು ಅನುದಾನ ಮೀಸಲಿಡುವ ಭರವಸೆ**

**ಶೌಚಗೃಹಗಳ ನಿರ್ಮಾಣಕ್ಕೆ ಒತ್ತು:** ನಗರದಲ್ಲಿ 14,000 ಕಿ.ಮೀ. ರಸ್ತೆಯಿದ್ದು, ಹಲವು ಕಡೆ ಪಾದಚಾರಿ ಮಾರ್ಗಗಳಿಲ್ಲ. ಹೀಗಾಗಿ, ಸಾರ್ವಜನಿಕರು ಹೆಚ್ಚಾಗಿ ಖಾಸಗಿ ವಾಹನ ಬಳಸುತ್ತಿದ್ದಾರೆ. ಉತ್ತಮ ಪಾದಚಾರಿ ಮಾರ್ಗ ನಿರ್ಮಿಸಿಕೊಡುವುದು ಮೊದಲ ಆದ್ಯತೆಯಾಗಿದೆ. ನಗರದಲ್ಲಿ 1,600 ಶೌಚಗೃಹಗಳ ಅಗತ್ಯವಿದ್ದು, ಕೇವಲ 585 ಶೌಚಗೃಹಗಳಿವೆ. ಎಲ್ಲೆಲ್ಲಿ ಪಾದಚಾರಿ ಮಾರ್ಗ ಮತ್ತು ಶೌಚಗೃಹಗಳ ಅಗತ್ಯವಿದೆ ಎಂಬ ಬಗ್ಗೆ ಜನರಿಂದ ಅಭಿಪ್ರಾಯ ಸಂಗ್ರಹಿಸಿ, ಬಜೆಟ್‌ನಲ್ಲಿ ಅನುದಾನ ಮೀಸಲಿಟ್ಟು ಅಭಿವೃದ್ಧಿ ಮಾಡಲಾಗುವುದು ಎಂದು ತಿಳಿಸಿದರು.

ವಿಜಯವಾಣಿ ಚಿತ್ರ




ಬಿಬಿಎಂಪಿ ಕೇಂದ್ರ ಕಚೇರಿ ಆವರಣದಲ್ಲಿ ಮಂಗಳವಾರ ಆಯೋಜಿಸಿದ್ದ 'ಮೈ ಸಿಟಿ - ಮೈ ಬಜೆಟ್ ಅಭಿಯಾನ'ಕ್ಕೆ ಚಾಲನೆ ಕಾರ್ಯಕ್ರಮದಲ್ಲಿ ಆಯುಕ್ತ ಮಂಜುನಾಥ ಪ್ರಸಾದ್, ವಿಶೇಷ ಆಯುಕ್ತ ಡಿ. ರಂದೀಪ್, ಜನಾಗ್ರಹ ಸಂಸ್ಥೆಯ ಸಪ್ನಾ ಮತ್ತಿತರರು ಉಪಸ್ಥಿತರಿದ್ದರು.

### ಜ.7ರವರೆಗೆ ಅಭಿಯಾನ

2015ರಿಂದ ಅಭಿಯಾನ ಮಾಡುತ್ತಿದ್ದು, 50 ಸಾವಿರಕ್ಕೂ ಹೆಚ್ಚು ಜನ ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ. ಬಜೆಟ್‌ನಲ್ಲಿ ಅಳವಡಿಸುವ ಪ್ರಮುಖ ಮಾಹಿತಿ ಸಂಗ್ರಹಿಸಿ ಪಾಲಿಕೆಗೆ ನೀಡಲಾಗುತ್ತಿದೆ. ಈ ವರ್ಷ ಪ್ರಮುಖವಾಗಿ ಫುಟ್‌ಪಾತ್ ಹಾಗೂ ಶೌಚಗೃಹ ನಿರ್ಮಾಣಕ್ಕೆ ಒತ್ತು ನೀಡಲಾಗಿದ್ದು, ಎಲ್ಲಿ ಅಗತ್ಯವಿದೆ ಎಂಬ ಮಾಹಿತಿ ಪಡೆಯಲಾಗುತ್ತಿದೆ. ಜ.7ರವರೆಗೆ ಅಭಿಯಾನ ನಡೆಯಲಿದ್ದು, ಜನರು ವೆಬ್‌ಸೈಟ್ ಅಥವಾ ಮೊ: 702238566 ನಂಬರ್‌ಗೆ ವ್ಯಾಟ್ಸ್‌ಆ್ಯಪ್ ಮೂಲಕ ಅಭಿಪ್ರಾಯ ತಿಳಿಸಬಹುದು ಎಂದು ಜನಾಗ್ರಹ ತಂಡದ ನಾಯಕಿ ಸಪ್ನಾ ತಿಳಿಸಿದರು.

ನಗರದಲ್ಲಿ ಸಾರ್ವಜನಿಕ ಶೌಚಗೃಹ ನಿರ್ಮಾಣಕ್ಕೆ ಸರ್ಕಾರ ಹಾಗೂ ಪಾಲಿಕೆ ವತಿಯಿಂದ ಸಾಕಷ್ಟು ಅನುದಾನ ಮೀಸಲಿಡಲಾಗಿದೆ. ಆದರೆ, ಎಲ್ಲೆಲ್ಲಿ ಹೆಚ್ಚು ಶೌಚಗೃಹ ಅಗತ್ಯವಿದೆ ಎಂದು ಪರಿಶೀಲನೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

| ಡಿ. ರಂದೀಪ್ ಬಿಬಿಎಂಪಿ ಘನತ್ಯಾಜ್ಯ ವಿಭಾಗ ವಿಶೇಷ ಆಯುಕ್ತ

Bengaluru Edition
Dec 22, 2020 Page No. 5
Powered by : eReleGo.com

ವಿಜಯವಾಣಿ
ಕನ್ನಡಿಗರ ಧ್ವನಿ

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ

# ಕರೊನಾ ಎರಡನೇ ಅಲೆಯಿಲ್ಲ

## ಬಿಬಿಎಂಪಿ ಆಯುಕ್ತರ ಸ್ಪಷ್ಟನೆ | ಆತಂಕಪಡದೆ ನಿಯಮ ಪಾಲಿಸಲು ಜನರಿಗೆ ಸೂಚನೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ನಗರದಲ್ಲಿ ಕರೊನಾ ಸೋಂಕಿನ 2ನೇ ಅಲೆ ಇಲ್ಲದಿರುವುದರಿಂದ ಜನ ಭಯ ಪಡಬೇಕಿಲ್ಲ. ಆದರೆ, ಕೋವಿಡ್ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದನ್ನು ಬಿಡುವಂತಿಲ್ಲ ಎಂದು ಬಿಬಿಎಂಪಿ ಆಯುಕ್ತ ಮಂಜುನಾಥಪ್ರಸಾದ್ ತಿಳಿಸಿದ್ದಾರೆ.

ಬ್ರಿಟನ್‌ನಲ್ಲಿ ಕರೊನಾ ಸೋಂಕಿನ ಹೊಸ ಪ್ರಭೇದ ಪತ್ತೆಯಾಗಿರುವುದರಿಂದ ಅಲ್ಲಿ ಕೆಲವು ವಿಶೇಷ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲಾಗಿದೆ. ಆದರೆ, ಭಾರತದಲ್ಲಿ ಹಾಗೂ ಬೆಂಗಳೂರಿನಲ್ಲಿ ಕರೊನಾ ಸೋಂಕಿನ ಹೊಸ ಪ್ರಬೇಧ ಕಾಣಿಸಿಕೊಂಡಿಲ್ಲ. ಇಲ್ಲಿ ಸೋಂಕಿನ 2ನೇ ಅಲೆಯ ಯಾವುದೇ ಪ್ರಕರಣಗಳು ವರದಿಯಾಗಿಲ್ಲ. ಜನ ಆತಂಕಕ್ಕೆ ಒಳಗಾಗುವ ಅವಶ್ಯಕತೆಯಲ್ಲ. ನಿತ್ಯ 45 ಸಾವಿರ ಕೋವಿಡ್ ಪರೀಕ್ಷೆ ಮಾಡಲಾಗುತ್ತಿದ್ದು, ಹರಡುವಿಕೆ ಪ್ರಮಾಣ ನಿಯಂತ್ರಣದಲ್ಲಿದೆ. ಸಿರೊಲಾಜಿಕಲ್ (ಸೆರೋ) ವರದಿ ಪ್ರಕಾರ, ಸೋಂಕು ಹೆಚ್ಚಾಗುವ ಪ್ರದೇಶಗಳಲ್ಲಿ ಹೆಚ್ಚಿಕ ಕೋವಿಡ್ ಪರೀಕ್ಷೆ ಮಾಡಲಾಗುತ್ತಿದೆ ಎಂದು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

**» ಲಸಿಕೆ ಪಡೆವ 1.5 ಲಕ್ಷ ಕರೊನಾ ಯೋಧರ ಮಾಹಿತಿ ರವಾನೆ**

ನಗರದಲ್ಲಿ ಕರೊನಾ ಸೋಂಕು ಹರಡುವಿಕೆ ನಿಯಂತ್ರಣ ಮತ್ತು ನಿರ್ವಹಣೆ ಕಾರ್ಯದಲ್ಲಿ ಮುಂಚೂಣಿಯಲ್ಲಿದ್ದ 1.50 ಲಕ್ಷ ಕರೊನಾ ವಾರಿಯರ್‌ಗಳಿಗೆ ಮೊದಲ ಹಂತದಲ್ಲಿ ಕೋವಿಡ್ ಲಸಿಕೆ ನೀಡಲಾಗುತ್ತದೆ. ಲಸಿಕೆ ಪಡೆಯಬೇಕಿರುವವರ ಸಮಗ್ರ ಮಾಹಿತಿಯನ್ನು ಕೇಂದ್ರ ಸರ್ಕಾರದ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಲಾಗಿದೆ. ನಗರದ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ದಾಸಪ್ಪ ಆಸ್ಪತ್ರೆ ಸೇರಿ ಏಕಕಾಲಕ್ಕೆ 23 ಲಕ್ಷ ಕೋವಿಡ್ ಲಸಿಕೆ ಸಂಗ್ರಹಣೆ ವ್ಯವಸ್ಥೆಯಿದ್ದು, ಕೆಲವು ಐಸ್‌ಲೆಂಡ್ ರೆಫ್ರಿಜಿರೇಟರ್ ಅವಶ್ಯಕತೆಯಿದೆ ಎಂದರು.


ವಿಜಯವಾಣಿ ಚಿತ್ರ

### ಅಪಾರ್ಟ್‌ಮೆಂಟ್‌ಗಳಿಗೆ ಮಾರ್ಗಸೂಚಿ

**ಕ್ರಿಸ್‌ಮಸ್ ಮತ್ತು ಹೊಸ ವರ್ಷಾಚರಣೆ ವೇಳೆ ಜನಸಂದಣಿಯಾಗದಂತೆ ಸರಳ ಆಚರಣೆ ಮಾಡಬೇಕು. ಹೀಗಾಗಿ, ನಗರದ ಎಲ್ಲ ಅಪಾರ್ಟ್‌ಮೆಂಟ್‌ಗಳಿಗೂ ಕೋವಿಡ್ ಮಾರ್ಗಸೂಚಿ ಅನ್ವಯವಾಗಲಿದೆ. ನಿಯಮ ಉಲ್ಲಂಘನೆಯಾದಲ್ಲಿ ಸಂಬಂಧಪಟ್ಟವರ ವಿರುದ್ಧ ಕ್ರಮ ಜರುಗಿಸಲಾಗುವುದು. ಹೋಟೆಲ್, ಪಬ್ ಹಾಗೂ ರೆಸ್ಟೋರೆಂಟ್‌ಗಳಲ್ಲಿ ಹೆಚ್ಚು ಜನ ಸೇರುವಂತಿಲ್ಲ. ಸಾರ್ವಜನಿಕ ಸ್ಥಳಗಳಲ್ಲಿ ಹೊಸ ವರ್ಷ ಆಚರಣೆ ಮಾಡುವಂತಿಲ್ಲ. ನಿಯಮ ಪಾಲನೆ ಮೇಲ್ವಿಚಾರಣೆ ಮಾಡಲು 440 ಮಾರ್ಷಲ್‌ಗಳನ್ನು ನಿಯೋಜಿಸಲಾಗಿದೆ ಎಂದು ಆಯುಕ್ತರು ತಿಳಿಸಿದರು.**

### ಸೋಂಕು ಪರೀಕ್ಷೆ ವಿಳಂಬವೇ ಸಾವಿಗೆ ಕಾರಣ

**ಕರೊನಾ ಸೋಂಕು ಇಳಿಕೆಯಾಗಿದೆ. ಒಂದು ವಾರದಿಂದ 500ಕ್ಕಿಂತ ಕಡಿಮೆ ಪ್ರಕರಣಗಳು ವರದಿಯಾಗುತ್ತಿವೆ. ಆದರೆ, ನವೆಂಬರ್‌ನಲ್ಲಿ ಸೋಂಕಿನಿಂದ 271 ಮಂದಿ ಮೃತಪಟ್ಟಿದ್ದರು. ಈ ಬಗ್ಗೆ ಡೆತ್ ಅನಾಲಿಸಿಸ್ (ಸಾವಿನ ವಿಶ್ಲೇಷಣೆ) ಮಾಡಲಾಗಿದ್ದು, ಇದರಲ್ಲಿ ಸೋಂಕಿನ ಲಕ್ಷಣವಿದ್ದವರು ಶೀಘ್ರ ಪರೀಕ್ಷೆ ಮಾಡಿಸಿಕೊಂಡು ಚಿಕಿತ್ಸೆ ಪಡೆಯದಿರುವುದು ಗೊತ್ತಾಗಿದೆ. ಇಂತಹ ಪ್ರಕರಣಗಳು ಗಂಭೀರ ಸ್ವರೂಪಕ್ಕೆ ತಿರುಗಿ ಸಾವನ್ನಪ್ಪುತ್ತಿವೆ. ಡಿಸೆಂಬರ್‌ನಿಂದ ಹೆಚ್ಚು ಜಾಗೃತಿ ಮೂಡಿಸುವ ಜತೆಗೆ, ವೇಗವಾಗಿ ಪರೀಕ್ಷೆ ಮಾಡುತ್ತಿರುವ ಕಾರಣ 20 ದಿನಗಳಲ್ಲಿ 130 ಸೋಂಕಿತರ ಸಾವು ಸಂಭವಿಸಿದೆ. ಸೋಂಕಿನ ಲಕ್ಷಣ ಕಂಡು ಬಂದಲ್ಲಿ ನಿರ್ಲಕ್ಷ್ಯ ಮಾಡಬಾರದು ಎಂದು ಮಂಜುನಾಥಪ್ರಸಾದ್ ಸಲಹೆ ನೀಡಿದರು.**

## 6 ತಿಂಗಳ ಬಳಿಕ ಅತಿ ಕಡಿಮೆ ಪ್ರಕರಣ

**ಬೆಂಗಳೂರು:** ನಗರದಲ್ಲಿ ಸೋಮವಾರ ಕೇವಲ 363 ಹೊಸ ಕೋವಿಡ್ ಸೋಂಕಿತರು ಪತ್ತೆಯಾಗಿದ್ದಾರೆ. ಈ ಮೂಲಕ ಕಳೆದ 6 ತಿಂಗಳ ಬಳಿಕ ಅತ್ಯಂತ ಕಡಿಮೆ ಪ್ರಕರಣ ದಾಖಲಾದಂತಾಗಿದೆ. ಜೂ.27 ರಂದು ಒಂದೇದಿನ 596 ಕೋವಿಡ್ ಪ್ರಕರಣ ಪತ್ತೆಯಾಗುವ ಮೂಲಕ 500ರ ಗಡಿ ದಾಟಿತ್ತು. ಕಳೆದ ಮೂರ್ನಾಲ್ಕು ದಿನಗಳಿಂದ ಸೋಂಕಿತರ ಸಂಖ್ಯೆ 400ಕ್ಕಿಂತ ಕಡಿಮೆ ಕಂಡುಬರುತ್ತಿರುವುದು ಸೋಂಕಿನ ಆತಂಕ ನಿಧಾನವಾಗಿ ದೂರವಾಗುತ್ತಿದೆ. ಈವರೆಗೆ ವರದಿಯಂತೆ ಒಟ್ಟು ಸೋಂಕಿತರ ಸಂಖ್ಯೆ 3,83,231ಕ್ಕೆ ಏರಿದೆ. ಸೋಮವಾರ 709 ಮಂದಿ ಸೋಂಕುಮುಕ್ತರಾಗಿದ್ದು, ಒಟ್ಟು ಗುಣಮುಖರ ಸಂಖ್ಯೆ 3,69,701ಕ್ಕೆ ತಲುಪಿದೆ. 5 ಮಂದಿ ಬಲಿಯಾಗಿದ್ದು, ಒಟ್ಟು ಸೋಂಕಿನಿಂದ 4,278 ಜನರು ಮೃತಪಟ್ಟಿದ್ದಾರೆ. 9,256 ಸಕ್ರಿಯ ಪ್ರಕರಣಗಳಿದ್ದು, ಈ ಪೈಕಿ 102 ಸೋಂಕಿತರ ಆರೋಗ್ಯ ಸ್ಥಿತಿ ಗಂಭೀರವಾಗಿದೆ.

ವಿಜಯವಾಣಿ
ಕನ್ನಡಿಗರ ಧ್ವನಿ

# ಲೆಕ್ಕಾಧಿಕಾರಿ ಕಚೇರಿ ಸಿಬ್ಬಂದಿ ಸ್ಥಾನಪಲ್ಲಟ

**ಬೆಂಗಳೂರು:** ಬಿಬಿಎಂಪಿ ಲೆಕ್ಕಾಧಿಕಾರಿ ವಿಭಾಗದಲ್ಲಿ 680 ಕೋಟಿ ರೂ. ಹಗರಣ ನಡೆದಿರುವ ಹಿನ್ನೆಲೆಯಲ್ಲಿ 3 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದ ಅಧಿಕಾರಿಗಳನ್ನು ಸ್ಥಾನಪಲ್ಲಟ ಮಾಡಲಾಗಿದೆ ಎಂದು ಪಾಲಿಕೆ ಆಡಳಿತ ವಿಭಾಗದ ವಿಶೇಷ ಆಯುಕ್ತ ಜೆ. ಮಂಜುನಾಥ್ ತಿಳಿಸಿದ್ದಾರೆ. 2 ತಿಂಗಳ ಹಿಂದೆ ನಡೆದಿರುವ ಬಿಲ್ ಪಾವತಿಯಲ್ಲಿ ಅಕ್ರಮ ಸಂಬಂಧ ಮುಖ್ಯ ಲೆಕ್ಕಾಧಿಕಾರಿ ಯನ್ನು ಅಮಾನತು ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಅಕ್ರಮ ನಡೆಯದಂತೆ ಜಾಗ್ರತೆ ವಹಿಸಬೇಕಿದೆ. ಹೀಗಾಗಿ, ಈ ವಿಭಾಗದಲ್ಲಿ 3 ವರ್ಷಕ್ಕಿಂತಲೂ ಹೆಚ್ಚಿನ ಅವಧಿಯಲ್ಲಿ ಕೆಲಸ ಮಾಡುವ 21ಕ್ಕೂ ಅಧಿಕ ಅಧಿಕಾರಿಗಳನ್ನು ಸ್ಥಾನಪಲ್ಲಟ ಮಾಡಲಾಗಿದೆ. ಬೇರೆ ಸಿಬ್ಬಂದಿಯನ್ನು ಇಲ್ಲಿಗೆ ನಿಯೋಜಿಸಲಾಗಿದೆ ಎಂದಿದ್ದಾರೆ.

» **ಇಪ್ಪತ್ತೊಂದು ಅಧಿಕಾರಿಗಳ ಮೇಲೆ ಕ್ರಮ**

ವಿಶ್ವವಾಣಿ

### ಬಿಬಿಎಂಪಿ ಆಯುಕ್ತ ಮಂಜುನಾಥ್ ಪ್ರಸಾದ್ ಉದ್ಘಾಟನೆ | ಉತ್ತಮ ಪಾದಾಚಾರಿ ಮಾರ್ಗ ಸೇವೆ ಅಗತ್ಯ

# ಮೈಸಿಟಿ-ಮೈ ಬಜೆಟ್ ಅಭಿಯಾನಕ್ಕೆ ಚಾಲನೆ

**ವಿಶ್ವವಾಣಿ ಸುದ್ದಿಮನೆ ಬೆಂಗಳೂರು**

ಜನಾಗ್ರಹ ಹಾಗೂ ವಿವಿಧ ಸಂಘ ಸಂಸ್ಥೆಗಳು ಆರಂಭಿಸಿದ ಮೈಸಿಟಿ ಮೈಬಜೆಟ್ ಅಭಿಯಾನಕ್ಕೆ ಬಿಬಿಎಂಪಿ ಆಯುಕ್ತ ಮಂಜುನಾಥ್ ಪ್ರಸಾದ್ ಕೇಂದ್ರ ಕಚೇರಿಯಲ್ಲಿ ಚಾಲನೆ ನೀಡಿದರು.

ಬಸ್ ಹಾಗೂ ಬ್ಯಾಟರಿ ಚಾಲಿತ ಆಟೋಗಳ ಮೂಲಕ ಜನರ ಮನೆ ಬಾಗಿಲಿಗೆ ಹೋಗಿ, ಪಾಲಿಕೆ ಬಜೆಟ್‌ನಲ್ಲಿ ಮುಂದೆ ಜಾರಿಗೆ ತರಬೇಕಾದ ಅಗತ್ಯ ಯೋಜನೆಗಳ ಬಗ್ಗೆ ಅನಿಸಿಕೆ ಸಂಗ್ರಹಿಸಲು ಮೈ ಸಿಟಿ-ಮೈ ಬಜೆಟ್ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಈ ಕುರಿತು ಆಯುಕ್ತ ಮಂಜುನಾಥ್ ಪ್ರಸಾದ್ ಮಾತನಾಡಿ, ನಗರದಲ್ಲಿ 14 ಸಾವಿರ ಕಿ.ಮೀ ರಸ್ತೆಯಿದೆ. ಈ ಎಲ್ಲ ರಸ್ತೆಗಳಲ್ಲಿ ಪಾದಾಚಾರಿ ಮಾರ್ಗ ಇರಬೇಕು. ಆದರೆ, ಹಲವಾರು ಕಡೆ ಪಾದಾಚಾರಿ ಮಾರ್ಗ ಇಲ್ಲ, ಇದರಿಂದಾಗಿ ಸಾರ್ವಜನಿಕರು ಸುರಕ್ಷಿತವಾಗಿ ನಡೆದುಕೊಂಡು ಹೋಗಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ ಉತ್ತಮ ಪಾದಾಚಾರಿ ಮಾರ್ಗ ಸೇವೆ ಒದಗಿಸಬೇಕಿದೆ. ನಗರದಲ್ಲಿ 1,600 ಶೌಚಾಲಯಗಳ ಅಗತ್ಯವಿದ್ದು, ಈಗ ಕೇವಲ 478 ಶೌಚಾಲಯಗಳಿವೆ. ಹೀಗಾಗಿ ಅಗತ್ಯವಿರುವ ಕಡೆ ಶೌಚಾಲಯ ನಿರ್ಮಾಣ ಮಾಡಬೇಕಿದೆ. ಇದನ್ನು ಸಾರ್ವಜನಿಕರ ಅನಿಸಿಕೆ ಪಡೆದು ನಿರ್ಮಾಣ ಮಾಡಲಾಗುವುದು ಎಂದರು.

**ಬಿಬಿಎಂಪಿ ಬಜೆಟ್‌ನಲ್ಲಿ ಅಳವಡಿಕೆ:** ಜನಾಗ್ರಹ ತಂಡದ ಮುಖ್ಯಸ್ಥೆ ಸ್ವಪ್ನಾ ಮಾತನಾಡಿ, 2015ರಿಂದ ಈ ಅಭಿಯಾನ ಮಾಡುತ್ತಿದ್ದು, 50 ಸಾವಿರಕ್ಕೂ ಹೆಚ್ಚು ಜನ 90 ಸಾವಿರಕ್ಕೂ ಹೆಚ್ಚು ಅಭಿಪ್ರಾಯ ಹಂಚಿಕೊಂಡಿದ್ದಾರೆ. ಬಜೆಟ್‌ನಲ್ಲಿ ಏನೆಲ್ಲಾ ಪ್ರಮುಖ ಯೋಜನೆಗಳ ಅಗತ್ಯವಿದೆ ಎಂದು ಜನರು ನೀಡುವ ಮಾಹಿತಿ ಸಂಗ್ರಹಿಸಿ, ಬಿಬಿಎಂಪಿ ಬಜೆಟ್‌ನಲ್ಲಿ ಅಳವಡಿಸಿಕೊಳ್ಳಲಾಗುತ್ತಿದೆ. ಈ ವರ್ಷ ಪ್ರಮುಖವಾಗಿ ಪಾದಚಾರಿ ಮಾರ್ಗ ಹಾಗೂ ಶೌಚಾಲಯ ನಿರ್ಮಾಣದ ಬಗ್ಗೆ ಹೆಚ್ಚು ಒತ್ತು ನೀಡಿ, ಎಲ್ಲಿ ಶೌಚಾಲಯದ ಅಗತ್ಯವಿದೆ ಎಂಬ ಮಾಹಿತಿ ಪಡೆಯಲಾಗುತ್ತಿದೆ. ಜ.7ರವರೆಗೆ ಈ ಅಭಿಯಾನ ನಡೆಯಲಿದೆ ಎಂದರು.

ನಗರದಲ್ಲಿ ಉತ್ತಮ ಪಾದಚಾರಿ ಮಾರ್ಗಗಳನ್ನು ನಿರ್ಮಿಸಿದರೆ ಜನರು ಹೆಚ್ಚಾಗಿ ಅವುಗಳನ್ನು ಬಳಸುತ್ತಾರೆ. ಆದರೆ, ನಗರದಲ್ಲಿ ಬಹುತೇಕ ಪಾದಚಾರಿ ಮಾರ್ಗಗಳು ದುರಸ್ತಿಯಲ್ಲಿರುವುದು, ಪಾದಚಾರಿ ಮಾರ್ಗಗಳಲ್ಲಿ ಟ್ರಾನ್ಸ್ ಫಾರ್ಮರ್‌ಗಳಿರುವುದು, ಕಸ ಬಿದ್ದಿರುವುದರಿಂದ ಹೆಚ್ಚಾಗಿ ಜನ ಓಡಾಡುವುದಿಲ್ಲ, ಅದನ್ನೆಲ್ಲಾ ಸರಿಪಡಿಸಬೇಕಿದ್ದು, ನಾರದಲ್ಲಿ ಎಲ್ಲೆಲ್ಲಿ ಪಾದಚಾರಿ ಮಾರ್ಗಗಳ ಅವಶ್ಯಕತೆಯಿದೆ. ಎಲ್ಲೆಲ್ಲಿ ದುರಸ್ತಿಪಡಿಸಬೇಕಿದೆ ಎಂಬುದನ್ನು ಸಾರ್ವಜನಿಕರ ಬಳಿಯಿಂದಲೇ ಅಭಿಪ್ರಾಯ ಪಡೆದು ಅದನ್ನು ಮೊದಲ ಆದ್ಯತೆಯಾಗಿ ತೆಗೆದುಕೊಂಡು 2021-22ನೇ ಆಯವ್ಯಯದಲ್ಲಿ ಸೇರಿಸಿ ದುರಸ್ತಿ ಕಾರ್ಯ ಹಾಗೂ ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗುವುದು.



ಮೈಸಿಟಿ, ಮೈಬಜೆಟ್ ಅಭಿಯಾನಕ್ಕೆ ಬಿಬಿಎಂಪಿ ಆಯುಕ್ತ ಮಂಜುನಾಥ್ ಪ್ರಸಾದ್ ಕೇಂದ್ರ ಕಚೇರಿಯಲ್ಲಿ ಚಾಲನೆ ನೀಡಿದರು.

## ಅಭಿಪ್ರಾಯಗಳನ್ನು ತಿಳಿಸಿ

ಎಲ್ಲೆಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಾಣ ಮಾಡುವ ಅವಶ್ಯಕತೆ ಇದೆ ಎಂಬುದರ ಬಗ್ಗೆ ನಾಗರಿಕರಲ್ಲಿ ಅಭಿಪ್ರಾಯ ಸಂಗ್ರಹಿಸಲಾಗುವುದು. ಮೈ ಸಿಟಿ ಮೈ ಬಜೆಟ್ ಅಭಿಯಾನವು 7 ಜನವರಿ 2021ರವರೆಗೆ ನಡೆಯಲಿದ್ದು, ಪಾದಚಾರಿ ಮಾರ್ಗ ಹಾಗೂ ಸಾರ್ವಜನಿಕ ಶೌಚಾಲಯಗಳ ಬಗ್ಗೆ ಜನರಿಂದ ಬಂದ ಅನಿಸಿಕೆಗಳನ್ನು 2021-22ನೇ ಸಾಲಿನ ಆಯವ್ಯಯದಲ್ಲಿ ಸೇರಿಸಿ ಅದನ್ನು ಮೊದಲ ಆದ್ಯತೆಯಾಗಿ ತೆಗೆದುಕೊಂಡು ಕೆಲಸ ಮಾಡಲಾಗುತ್ತದೆ. ಇದಲ್ಲದೆ ವೆಬ್‌ಸೈಟ್/ವ್ಯಾಟ್ಸಾಪ್ ಮೂಲಕ ಅಭಿಪ್ರಾಯಗಳನ್ನು ತಿಳಿಸಬಹುದಾಗಿದೆ. ಮೈ ಸಿಟಿ-ಮೈ ಬಜೆಟ್ ಅಭಿಯಾನದಡಿ ಸಾರ್ವಜನಿಕರಿಂದ ಅಭಿಪ್ರಾಯಗಳನ್ನು ಪಡೆದು ಅದನ್ನು ಆಯವ್ಯಯದಲ್ಲಿ ಸೇರ್ಪಡೆ ಮಾಡಿ ಅಭಿವೃದ್ಧಿಗೊಳಿಸುವ ಕಾರ್ಯಕ್ರಮವಾಗಿದೆ.

## ನಗರದಲ್ಲಿವೆ ಅಗತ್ಯಕ್ಕಿಂತ ಕಡಿಮೆ ಶೌಚಾಲಯ

ನಗರದಲ್ಲಿ ಸುಮಾರು 585 ಸಾರ್ವಜನಿಕ ಶೌಚಾಲಯಗಳಿವೆ. ಆದರೆ ಒಂದು ಮಾನದಂಡದ ಪ್ರಕಾರ 1,600 ಸಾರ್ವಜನಿಕ ಶೌಚಾಲಯಗಳು ನಗರದಲ್ಲಿರಬೇಕು. ಪ್ರಸ್ತುತ ಶೌಚಾಲಯಗಳ ಕೊರತೆಯ ಜತೆಗೆ ಕೆಲ ಶೌಚಾಲಯಗಳನ್ನು ಸರಿಯಾಗಿ ನಿರ್ವಹಣೆ ಮಾಡದೆ ಬಳಕೆ ಮಾಡಲಾಗದಂತಹ ಪರಿಸ್ಥಿತಿ ಇದೆ. ಇದಲ್ಲದೆ ಸಾರ್ವಜನಿಕ ಸ್ಥಳಗಳಲ್ಲಿ ಮೂತ್ರವಿಸರ್ಜನೆ ಮಾಡುವ ಯಲ್ಲೋ ಸ್ಪಾಟ್‌ಗಳನ್ನು ಗುರುತಿಸಿ ಅವುಗಳನ್ನು ತೆಗೆಯುವ ಕೆಲಸ ಮಾಡಬೇಕಿದೆ.

ಉದಯವಾಣಿ
ಜನಮನದ ಜೀವನಾಡಿ

# 1.50 ಲಕ್ಷ ವಾರಿಯರ್ಸ್ ಮಾಹಿತಿ ಅಪ್‌ಲೋಡ್: ಬಿಬಿಎಂಪಿ ಆಯುಕ್ತ

**ಬೆಂಗಳೂರು:** ಬ್ರಿಟನ್‌ನಲ್ಲಿ ಕೊರೊನಾ ಹೊಸ ಪ್ರಭೇದ ಪತ್ತೆಯಾಗಿದ್ದು, ಅಲ್ಲಿ ಕೆಲವು ನಿರ್ದಿಷ್ಟ ಮಾರ್ಗಸೂಚಿ ಅಳವಡಿಸಿಕೊಳ್ಳಲಾಗಿದೆ. ಆದರೆ, ದೇಶದಲ್ಲಿ ಹಾಗೂ ಬೆಂಗಳೂರಿನಲ್ಲಿ ಕೊರೊನಾ ಸೋಂಕಿನ ಹೊಸ ಪ್ರಬೇಧ ವರದಿಯಾಗಿಲ್ಲ ಎಂದು ಬಿಬಿಎಂಪಿ ಆಯುಕ್ತ ಮಂಜುನಾಥ ಪ್ರಸಾದ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಆಯುಕ್ತರು, ಈ ರೀತಿಯ ಯಾವುದೇ ಪ್ರಕರಣ ವರದಿಯಾಗಿಲ್ಲ. ಹೀಗಾಗಿ, ಜನ ಆತಂಕಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

ನಗರದಲ್ಲಿ ಮೊದಲ ಹಂತದಲ್ಲಿ 1.50 ಲಕ್ಷ ಕೊರೊನಾ ವಾರಿಯರ್ಸ್‌ಗಳಿಗೆ ಲಸಿಕೆ ನೀಡುವ ನಿಟ್ಟಿನಲ್ಲಿ ಅವರ ಸಮಗ್ರ ಮಾಹಿತಿಯನ್ನು ಕೇಂದ್ರ ಸರ್ಕಾರದ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ. ನಗರದಲ್ಲಿ ಸೋಂಕು ತಡೆಯುವ ನಿಟ್ಟಿನಲ್ಲಿ ಫ್ರಂಟ್‌ಲೈನ್ ಯೋಧರಂತೆ ಕಾರ್ಯನಿರ್ವಹಿಸಿರುವ 1.50 ಲಕ್ಷ ವಾರಿಯರ್ಸ್ ಮಾಹಿತಿ ಕಳುಹಿಸಿಕೊಡಲಾಗಿದೆ ಎಂದರು.

ಮೊದಲ ಹಂತದಲ್ಲಿ ಕೊರೊನಾ ವಾರಿಯರ್ಸ್‌ಗೆ ಲಸಿಕೆ ನೀಡಲಾಗುತ್ತದೆ. ಈಗಾಗಲೇ ನಗರದಲ್ಲಿ ಏಕಕಾಲಕ್ಕೆ ಬರೋಬ್ಬರಿ 23 ಲಕ್ಷ ಕೋವಿಡ್ ಲಸಿಕೆ ಸಂಗ್ರಹಣೆ ವ್ಯವಸ್ಥೆ ಇದೆ. ಲಸಿಕೆ ಸಂಗ್ರಹಿಸುವುದಕ್ಕೆ ಐಸ್‌ಲೆಂಡ್ ರೆಫ್ರಿಜಿರೇಟರ್ ಅವಶ್ಯಕತೆ ಇದೆ. ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ತಲಾ 50 ಸಾವಿರ ಲಸಿಕೆ ಸಂಗ್ರಹಿಸುವ ಸಾಮರ್ಥ್ಯವಿರುವ 40 ಐಸ್‌ಲೆಂಡ್ ರೆಫ್ರಿಜಿರೇಟರ್, ದಾಸಪ್ಪ ಆಸ್ಪತ್ರೆಯಲ್ಲಿ 4 ಐಸ್‌ಲೆಂಡ್ ರೆಫ್ರಿಜಿರೇಟರ್‌ಗಳಿವೆ. ಅಲ್ಲದೆ, ದಾಸಪ್ಪ ಆಸ್ಪತ್ರೆಯಲ್ಲಿ 30 ಸಾವಿರ ಲಸಿಕೆ (ವ್ಯಾಕ್ಸಿನ್) ಸಂಗ್ರಹಿಸುವ 3 ಐಸ್‌ಲೆಂಡ್ ರೆಫ್ರಿಜಿರೇಟರ್‌ಗಳಿವೆ. ಏಕಕಾಲಕ್ಕೆ 23 ಲಕ್ಷ ವ್ಯಾಕ್ಸಿನ್ ಸಂಗ್ರಹಿಸಬಹುದು. ನಗರದಲ್ಲಿ ಕೊರೊನಾ ಸೋಂಕು ಪ್ರಕರಣಗಳ ಸಂಖ್ಯೆ ಇಳಿಕೆಯಾಗಿದೆ. ಎಂದು ಹೇಳಿದರು.

## ಹೊಸ ವರ್ಷಾಚರಣೆ ನಿಯಮ ಅಪಾರ್ಟ್‌ಮೆಂಟ್‌ಗಳಿಗೂ ಅನ್ವಯ

ನಗರದಲ್ಲಿ ಕ್ರಿಸ್‌ಮಸ್, ಹೊಸ ವರ್ಷಾಚರಣೆ ವೇಳೆ ಹೆಚ್ಚು ಜನ ಸೇರದೆ ಸರಳವಾಗಿ ಹೊಸ ವರ್ಷ ಆಚರಣೆ ಮಾಡಬೇಕು ಎನ್ನುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಮಾರ್ಗಸೂಚಿ ಹೊರಡಿಸಿದ್ದು, ಈ ಮಾರ್ಗಸೂಚಿ ನಗರದಲ್ಲಿನ ಎಲ್ಲಾ ಅಪಾರ್ಟ್‌ಮೆಂಟ್‌ಗಳಿಗೂ ಅನ್ವಯಿಸಲಿದೆ. ನಿಯಮ ಉಲ್ಲಂಘನೆ ಮಾಡಿದರೆ ಕ್ರಮ ಕೈಗೊಳ್ಳಲಾಗುವುದು ಎಂದರು. ನಗರದ ಹೋಟೆಲ್, ಪಬ್ ಹಾಗೂ ರೆಸ್ಟೋರೆಂಟ್ ಗಳಲ್ಲಿ ಹೆಚ್ಚು ಜನ ಸೇರುವಂತಿಲ್ಲ, ಸಾರ್ವಜನಿಕ ಪ್ರದೇಶದಲ್ಲಿ ಹೊಸ ವರ್ಷ ಆಚರಣೆ ಮಾಡುವಂತಿಲ್ಲ, ನಿಯಮ ಪಾಲನೆ ಮೇಲ್ವಿಚಾರಣೆ ನೋಡಿಕೊಳ್ಳಲು 440 ಜನ ಮಾರ್ಷಲ್‌ಗಳು ಕಾರ್ಯನಿರ್ವಹಿಸಲಿದ್ದಾರೆಂದರು.

ಉದಯವಾಣಿ
ಜನಮನದ ಜೀವನಾಡಿ

‘ಮೈ ಸಿಟಿ – ಮೈ ಬಜೆಟ್ ಅಭಿಯಾನ’ಕ್ಕೆ ಚಾಲನೆ ■ 2021–22ರ ಪಾಲಿಕೆ ಬಜೆಟ್‌ನಲ್ಲಿ ಶಾಶ್ವತ ಪರಿಹಾರ: ಆಯುಕ್ತರು

# ಸಾರ್ವಜನಿಕ ಶೌಚಾಲಯ, ಪಾದಚಾರಿ ಮಾರ್ಗಕ್ಕೆ ಆದ್ಯತೆ

**ಬೆಂಗಳೂರು:** ನಗರದಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವ ಹಾಗೂ ತುರ್ತು ಅವಶ್ಯವಿರುವ ಪ್ರದೇಶಗಳಲ್ಲಿ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಾಣ ಮಾಡಲು ಪಾಲಿಕೆ ಸಿದ್ಧವಿದೆ ಎಂದು ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ್ ಪ್ರಸಾದ್ ತಿಳಿಸಿದರು.

ಜನಾಗ್ರಹ ಮತ್ತು ವಿವಿಧ ಸಂಘ ಸಂಸ್ಥೆಗಳು ನಡೆಸುತ್ತಿರುವ ‘ಮೈ ಸಿಟಿ – ಮೈ ಬಜೆಟ್ ಅಭಿಯಾನ’ಕ್ಕೆ ಪಾಲಿಕೆ ಕೇಂದ್ರ ಕಚೇರಿ ಆವರಣದಲ್ಲಿ ಸೋಮವಾರ ಚಾಲನೆ ನೀಡಿ ಮಾತನಾಡಿದ ಆಯುಕ್ತರು, ಸಾರ್ವಜನಿಕರಿಂದಲೇ ಅಭಿಪ್ರಾಯ ವ್ಯಕ್ತವಾದರೆ ಯೋಜನೆ ಮತ್ತಷ್ಟು ಯಶಸ್ವಿಯಾಗಲಿದೆ. 2021–22ರ ಪಾಲಿಕೆ ಬಜೆಟ್‌ನಲ್ಲಿ ಸಾರ್ವಜನಿಕ ಶೌಚಾಲಯ ವ್ಯವಸ್ಥೆ ಮತ್ತು ಪಾದಾಚಾರಿ ಮಾರ್ಗದ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲಾಗುವುದು ಎಂದು ಆಯುಕ್ತರು ಹೇಳಿದರು. ಬಿಬಿಎಂಪಿ ವಿಶೇಷ (ಘನತ್ಯಾಜ್ಯ ನಿರ್ವಹಣೆ) ಆಯುಕ್ತ ಡಿ. ರಂದೀಪ್, ಜನಾಗ್ರಹ ಸಂಸ್ಥೆಯ ಸದಸ್ಯರಾದ ಮಹಾಲಕ್ಷ್ಮೀ, ಶ್ರೀನಿವಾಸ್ ಅಲವಿಲ್ಲಿ ಮತ್ತಿತರರಿದ್ದರು.

**ನಗರದ 64 ವಾರ್ಡ್‌ಗಳಲ್ಲಿ ಶೌಚಾಲಯವಿಲ್ಲ:** ನಗರದ 64 ವಾರ್ಡ್‌ಗಳಲ್ಲಿ ಸಾರ್ವಜನಿಕ ಶೌಚಾಲಯವೇ ಲಭ್ಯವಿಲ್ಲ ಎನ್ನುವ ಅಂಶ ಜನಾಗ್ರಹ ಸಂಸ್ಥೆ ನಡೆಸಿರುವ ಸಮೀಕ್ಷೆಯಲ್ಲಿ ಬೆಳಕಿಗೆ ಬಂದಿದೆ. ಬಿಬಿಎಂಪಿ ವ್ಯಾಪ್ತಿ ಸಾರ್ವಜನಿಕ ಪ್ರದೇಶದಲ್ಲಿ ಮೂತ್ರ ವಿಸರ್ಜನೆ ತಡೆಗಟ್ಟಲು ಯುಲ್ಲೋ ಸ್ಪಾಟ್ ಎಂಬ ಅಭಿಯಾನ ನಡೆಸುತ್ತಿದೆ. 198 ವಾರ್ಡ್‌ಗಳ ಪೈಕಿ 64 ವಾರ್ಡ್ ಹಾಗೂ ನಗರದ 11 ಪ್ರಮುಖ ಬಸ್ ನಿಲ್ದಾಣಗಳ ವ್ಯಾಪ್ತಿಯಲ್ಲಿ ಸಾರ್ವಜನಿಕ ಶೌಚಾಲಯವೇ ಇಲ್ಲ ಎಂಬ ಅಂಶ ಬೆಳಕಿಗೆ ಬಂದಿದೆ.

## ಮನೆ ಬಾಗಿಲಿಗೆ ಹೋಗಿ ಅಭಿಪ್ರಾಯ ಸಂಗ್ರಹ

ಜನಾಗ್ರಹ ಸಂಸ್ಥೆ ನಗರದಲ್ಲಿ 2015ರಿಂದ ಈ ಅಭಿಯಾನ ಮಾಡುತ್ತಿದ್ದು, 50 ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಿದ್ದಾರೆ. ಬಜೆಟ್‌ನಲ್ಲಿ ಅಳವಡಿಸುವ ಪ್ರಮುಖ ಮಾಹಿತಿ ಸಂಗ್ರಹಿಸಿ, ಪಾಲಿಕೆಗೆ ನೀಡಲಾಗುತ್ತಿದೆ. ಈ ಬಾರಿ ಶೌಚಾಲಯ, ಪಾದಚಾರಿ ಮಾರ್ಗಕ್ಕೆ ಒತ್ತು ನೀಡಲಾಗಿದೆ. ಜ.7ರವರೆಗೆ ಅಭಿಯಾನ ನಡೆಯಲಿದ್ದು, ಜನರು ವೆಬ್‌ಸೈಟ್ ಅಥವಾ ಮೊ.702238566 ನಂಬರ್‌ಗೆ ವಾಟ್ಸಪ್ ಮೂಲಕ ಅಭಿಪ್ರಾಯ ತಿಳಿಸಬಹುದು ಎಂದು ಜನಾಗ್ರಹ ತಂಡದ ಸದಸ್ಯೆ ಸ್ವಪ್ನಾ ಮಾಹಿತಿ ನೀಡಿದರು.

■ **ನಗರದ 64 ವಾರ್ಡ್‌ಗಳಲ್ಲಿ ಸಾರ್ವಜನಿಕ ಶೌಚಾಲಯವೇ ಲಭ್ಯವಿಲ್ಲ ಎನ್ನುವ ಅಂಶ ಜನಾಗ್ರಹ ಸಂಸ್ಥೆ ನಡೆಸಿರುವ ಸಮೀಕ್ಷೆಯಲ್ಲಿ ಬೆಳಕಿಗೆ ಬಂದಿದೆ.**

ಉದಯವಾಣಿ
ಜನಮನದ ಜೀವನಾಡಿ

# ಮಾರ್ಗ ಬದಲಾವಣೆ

**ಬೆಂಗಳೂರು:** ಹೆಬ್ಬಾಳದಿಂದ ನಾಗವಾರದ ಮಾರ್ಗ ತಲುಪುವ ರಸ್ತೆಯಲ್ಲಿ ವೈಟ್‌ಟಾಪಿಂಗ್ ಕಾಮಗಾರಿ ಪ್ರಾರಂಭಿಸುತ್ತಿರುವ ಹಿನ್ನಲೆಯಲ್ಲಿ ಹೆಬ್ಬಾಳದಿಂದ ನಾಗವಾರ ಕಡೆ ಹೋಗುವ ರಿಂಗ್ ರಸ್ತೆ ಮಾರ್ಗದ ವೀರಣ್ಣಪಾಳ್ಯ ಮೇಲ್ಸೇತುವೆಯ ಭಾಗದ ಸಂಚಾರ ಬದಲಾವಣೆ ಮಾಡಲಾಗಿದೆ. ಈ ಭಾಗದಲ್ಲಿ 2 ಹಂತದಲ್ಲಿ ಕಾಮಗಾರಿ ನಡೆಸಲು ಯೋಜನೆ ರೂಪಿಸಿಕೊಳ್ಳಲಾಗಿದೆ. ಮೊದಲ ಹಂತದಲ್ಲಿ ಹೆಬ್ಬಾಳದಿಂದ ನಾಗವಾರ ಕಡೆ ಹೋಗುವ ಮೇಲ್ಸೇತುವೆ ಒಂದು ಪಥದಲ್ಲಿ ಡಿ.22 ರಿಂದ ಜ.10 ರವರೆಗೆ ಕಾಮಗಾರಿ ನಡೆಯಲಿದೆ. ಹೀಗಾಗಿ, ಈ ಮಾರ್ಗದಲ್ಲಿ ಸಾಗುವ ವಾಹನ ಸರ್ವೀಸ್ ರಸ್ತೆಯ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗಿದೆ. ಜ.11ರ ನಂತರ 2ನೇ ಹಂತದಲ್ಲಿ ನಾಗವಾರದಿಂದ ಹೆಬ್ಬಾಳ ಕಡೆ ಬರುವ ಪಥದಲ್ಲಿ ಕಾಮಗಾರಿ ನಡೆಯಲಿದೆ. ಒಟ್ಟು 680 ಮೀಟರ್ ರಸ್ತೆಯಲ್ಲಿ ವೈಟ್‌ಟಾಪಿಂಗ್ ಮಾಡಲು ಯೋಜನೆ ರೂಪಿಸಿಕೊಳ್ಳಲಾಗಿದೆ. ರಿಂಗ್ ರಸ್ತೆಯಲ್ಲಿ ವಾಹನ ಸಂಚಾರ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ವಾಹನ ಸವಾರರು ಸಾಧ್ಯವಾದಷ್ಟು ಪರ್ಯಾಯ ಮಾರ್ಗ ಬಳಸಿಕೊಳ್ಳುವಂತೆ ಬಿಬಿಎಂಪಿ ಕೇಂದ್ರ ಯೋಜನಾ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಎನ್.ಚಂದ್ರಶೇಖರ್ ಮನವಿ ಮಾಡಿದ್ದಾರೆ.

ಉದಯವಾಣಿ
ಜನಮನದ ಜೀವನಾಡಿ

# ದಂಡವೇ 6.62 ಕೋಟಿ!

**ಬೆಂಗಳೂರು:** ನಗರದಲ್ಲಿ ಮಾಸ್ಕ್ ಹಾಗೂ ಸಾಮಾಜಿಕ ಅಂತರ ಕಾಪಾಡಿಕೊಳ್ಳದೆ ಇರುವವರಿಂದ ಇಲ್ಲಿಯವರೆಗೆ ಒಟ್ಟಾರೆ 6.62 ಕೋಟಿ ರೂ. (6,62,88,071) ದಂಡ ಸಂಗ್ರಹಿಸಲಾಗಿದೆ. ಸಾಮಾಜಿಕ ಅಂತರ ಹಾಗೂ ಮಾಸ್ಕ್ ಧರಿಸದೆ ಸೋಂಕು ನಿಯಂತ್ರಣ ನಿಯಮ ಉಲ್ಲಂಘನೆ ಮಾಡಿದ 2,88,782 ಜನರಿಂದ ದಂಡ ಸಂಗ್ರಹ ಮಾಡಲಾಗಿದೆ. ನಿಯಮ ಉಲ್ಲಂಘನೆ ತಡೆಗೆ ನಗರದಲ್ಲಿ ವಾರ್ಡ್ ಮಟ್ಟದ ಮಾರ್ಷಲ್‌ಗಳೊಂದಿಗೆ ಡಿ.7ರಿಂದ ಹೆಚ್ಚುವರಿ ವಿಶೇಷ ಮಾರ್ಷಲ್ ತಂಡದ ಸದಸ್ಯರೂ ನಿಯಮ ಉಲ್ಲಂಘನೆ ಮಾಡುತ್ತಿರುವವರ ಮೇಲೆ ದಂಡ ವಿಧಿಸುತ್ತಿದ್ದಾರೆ. ಇನ್ನು ಹೋಟೆಲ್, ರೆಸ್ಟೋರೆಂಟ್‌ಗಳಲ್ಲಿ ಜನ ಮಾಸ್ಕ್ ಧರಿಸದೆ ಇದ್ದರೆ ಮತ್ತು ಗುಂಪು ಸೇರಿದರೆ ಸಂಬಂಧಪಟ್ಟ ಮಾಲಿಕರಿಗೆ 5 ಸಾವಿರದಿಂದ 1 ಲಕ್ಷದವರೆಗೆ ದಂಡ ವಿಧಿಸುವ ಅವಕಾಶವಿದ್ದು, ಹೊಸ ಮಾರ್ಗಸೂಚಿ ಅನ್ವಯ ಇಲ್ಲಿಯವರೆಗೆ ಯಾವುದೇ ಪ್ರಕರಣ ದಾಖಲಾಗಿಲ್ಲ ಎಂದು ಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ.

ಉದಯವಾಣಿ Tue, 22 December
https://epaper.u

ಸಂಯುಕ್ತ ಕರ್ನಾಟಕ

# ಮೈಸಿಟಿ ಮೈಬಜೆಟ್ ಬಸ್‌ಗೆ ಚಾಲನೆ

**ಸಂ.ಕ.ಸಮಾಚಾರ ಬೆಂಗಳೂರು**

ನಗರದಲ್ಲಿ ಸಾರ್ವಜನಿಕ ಶೌಚಾಲಯ ಮತ್ತು ಪಾದಚಾರಿ ಮಾರ್ಗಗಳ ಬಗ್ಗೆ ನಾಗರಿಕರ ಪ್ರತಿಕ್ರಿಯೆ ಪಡೆಯುವ ಅಭಿಯಾನವನ್ನು ಹಮ್ಮಿಕೊಂಡಿದ್ದು ಇದಕ್ಕಾಗಿ ಸಿದ್ಧ ಮಾಡಲಾಗಿರುವ ವಾಹನಗಳಿಗೆ ಬಿಬಿಎಂಪಿ ಆಯುಕ್ತ ಮಂಜುನಾಥ ಪ್ರಸಾದ್ ಚಾಲನೆ ನೀಡಿದರು.



ಬಿಬಿಎಂಪಿ ಮೈಸಿಟಿ ಮೈ ಬಜೆಟ್ ಬಸ್ 2021-22ಕ್ಕೆ ಆಯುಕ್ತ ಮಂಜುನಾಥ ಪ್ರಸಾದ್ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ವಿಶೇಷ ಆಯುಕ್ತ ರಂದೀಪ್ ಮತ್ತಿತರರಿದ್ದರು.

ಜನಾಗ್ರಹ ಮತ್ತು ವಿವಿಧ ಸಂಘ ಸಂಸ್ಥೆಗಳು ನಡೆಸುತ್ತಿರುವ 'ಮೈ ಸಿಟಿ–ಮೈ ಬಜೆಟ್ ಅಭಿಯಾನ'ಕ್ಕೆ ಚಾಲನೆ ನೀಡಿದ ನಂತರ ಮಾತನಾಡಿದ ಅವರು, ನಾಗರಿಕರ ಪ್ರತಿಕ್ರಿಯೆ ಪಡೆಯಲು ವಿಶೇಷವಾಗಿ ವಿನ್ಯಾಸಗೊಳಿಸಲಾದ ಬಜೆಟ್ ಬಸ್ ಮತ್ತು 7 ಎಲೆಕ್ಟ್ರಿಕ್ ಆಟೋಗಳ ಮೂಲಕ ಅಭಿಯಾನ ಹಮ್ಮಿಕೊಳ್ಳಲಾಗಿದ್ದು ಈ ವಾಹನಗಳ ಮೂಲಕ ಪಾದಚಾರಿ ಮಾರ್ಗ ಮತ್ತು ಶೌಚಗೃಹಗಳ ಸಮಸ್ಯೆಗಳ ಬಗ್ಗೆ ಜನರಿಂದ ಅಭಿಪ್ರಾಯ ಪಡೆದುಕೊಂಡು ಅವುಗಳ ದುರಸ್ತಿ ಮತ್ತು ಅಭಿವೃದ್ಧಿಗೆ 2021–22ರ ಆಯವ್ಯಯದಲ್ಲಿ ಹೆಚ್ಚು ಅನುದಾನ ಮೀಸಲಿಡಲಾಗುವುದು ಎಂದರು.

ಈ ಸಂಸ್ಥೆಗಳ ಸದಸ್ಯರು ಬಸ್ ಹಾಗೂ ಬ್ಯಾಟರಿ ಚಾಲಿತ ಆಟೋಗಳ ಮೂಲಕ, ಜನರ ಮನೆ ಬಾಗಿಲಿಗೆ ಹೋಗಿ ಪಾಲಿಕೆ ಬಜೆಟ್‌ನಲ್ಲಿ ಜಾರಿಗೊಳಿಸಬೇಕಾದ ಅಗತ್ಯ ಯೋಜನೆಗಳ ಅಭಿಪ್ರಾಯ ಸಂಗ್ರಹಿಸಲಿದ್ದಾರೆ. ಇಲ್ಲಿ ಸಂಗ್ರಹಿಸಿದ ಜನರ ಅಭಿಪ್ರಾಯಗಳನ್ನು ಬಜೆಟ್‌ನಲ್ಲಿ ಆದ್ಯತೆಯ ವಿಷಯಗಳನ್ನಾಗಿ ಪರಿಗಣಿಸಲಾಗುವುದು ಎಂದು ಮಾಹಿತಿ ನೀಡಿದರು.

ನಗರದಲ್ಲಿ 1,600 ಶೌಚಗೃಹಗಳ ಅಗತ್ಯವಿದ್ದು ಕೇವಲ 585 ಶೌಚಗೃಹಗಳಿವೆ. ಹೀಗಾಗಿ ಎಲ್ಲೆಲ್ಲಿ ಪಾದಚಾರಿ ಮಾರ್ಗ ಮತ್ತು ಶೌಚಗೃಹಗಳ ಅಗತ್ಯವಿದೆ ಎಂಬುದನ್ನು ಜನರಿಂದ ಅಭಿಪ್ರಾಯ ಸಂಗ್ರಹಿಸಿ ಬಜೆಟ್‌ನಲ್ಲಿ ಅನುದಾನ ಮೀಸಲಿಟ್ಟು ಅಭಿವೃದ್ಧಿ ಮಾಡಲಾಗುವುದು ಎಂದು ತಿಳಿಸಿದರು.

ಸಂಯುಕ್ತ ಕರ್ನಾಟಕ

## ಕೊರೊನಾ ಸೋಂಕಿತರ ಸಂಖ್ಯೆ ಇಳಿಕೆ । 23 ಲಕ್ಷ ಲಸಿಕೆ ಸಂಗ್ರಹಣೆಗೆ ವ್ಯವಸ್ಥೆ

# ಲಸಿಕೆಗೆ 1.50 ಲಕ್ಷ ಮಂದಿ ಪಟ್ಟಿ ರವಾನೆ

**ಸಂ.ಕ. ಸಮಾಚಾರ ಬೆಂಗಳೂರು**

ನಗರದಲ್ಲಿನ 1.50 ಲಕ್ಷ ಜನ ಕೊರೊನಾ ವಾರಿಯರ್ಸ್‌ಗಳಿಗೆ ಕೊರೊನಾ ಲಸಿಕೆ ನೀಡುವ ನಿಟ್ಟಿನಲ್ಲಿ ಅವರ ಸಮಗ್ರ ಮಾಹಿತಿಯನ್ನು ಕೇಂದ್ರ ಸರ್ಕಾರಕ್ಕೆ ಬಿಬಿಎಂಪಿ ರವಾನೆ ಮಾಡಿದೆ.

ಈ ಕುರಿತು ಬಿಬಿಎಂಪಿ ಆಯುಕ್ತ ಮಂಜುನಾಥ ಪ್ರಸಾದ್ ಸುದ್ದಿಗಾರರಿಗೆ ವಿವರಿಸಿ, ನಗರದಲ್ಲಿ ಕೊರೊನಾ ಸೋಂಕು ತಡೆಯುವ ನಿಟ್ಟಿನಲ್ಲಿ ಮುಂಚೂಣಿ ಯೋಧರಂತೆ ಕಾರ್ಯನಿರ್ವಹಿಸಿರುವ 1.50 ಲಕ್ಷ ಕೊರೊನಾ ವಾರಿಯರ್ಸ್ ಮಾಹಿತಿಯನ್ನು ಕಳುಹಿಸಿ ಕೊಡಲಾಗಿದೆ. ಯಾರಿಗೆ ಲಸಿಕೆ ನೀಡಲಾಗುತ್ತದೆ ಎಂಬುದನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ ಎಂದರು.

ಮೊದಲ ಹಂತದಲ್ಲಿ ಕೊರೊನಾ ವಾರಿಯರ್ಸ್‌ಗೆ ಲಸಿಕೆ ನೀಡಲಾಗುತ್ತದೆ. ಈಗಾಗಲೇ ನಗರದಲ್ಲಿ ಏಕಕಾಲಕ್ಕೆ ಬರೋಬ್ಬರಿ 23 ಲಕ್ಷ ಕೋವಿಡ್ ಲಸಿಕೆ ಸಂಗ್ರಹಣೆ ವ್ಯವಸ್ಥೆ ಇದೆ. ಲಸಿಕೆ ಸಂಗ್ರಹಿಸುವುದಕ್ಕೆ ಐಸ್‌ಲೆಂಡ್ ರೆಫ್ರಿಜಿರೇಟರ್ ಅವಶ್ಯಕತೆ ಇದೆ. ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ತಲಾ 50 ಸಾವಿರ ಲಸಿಕೆ ಸಂಗ್ರಹಿಸುವ ಸಾಮರ್ಥ್ಯವಿರುವ 40 ಐಸ್‌ಲೆಂಡ್ ರೆಫ್ರಿಜಿರೇಟರ್ ಹಾಗೂ ದಾಸಪ್ಪ ಆಸ್ಪತ್ರೆಯಲ್ಲಿ ನಾಲ್ಕು ಐಸ್‌ಲೆಂಡ್ ರೆಫ್ರಿಜಿರೇಟರ್‌ಗಳಿವೆ. ಅಲ್ಲದೆ, ದಾಸಪ್ಪ ಆಸ್ಪತ್ರೆಯಲ್ಲಿ 30 ಸಾವಿರ ಲಸಿಕೆ ಸಂಗ್ರಹಿಸುವ ಮೂರು ಐಸ್‌ಲೆಂಡ್ ರೆಫ್ರಿಜಿರೇಟರ್‌ಗಳಿವೆ. ಏಕ ಕಾಲಕ್ಕೆ 23 ಲಕ್ಷ ವ್ಯಾಕ್ಸಿನ್ ಸಂಗ್ರಹಿಸಬಹುದು ಎಂದು ಮಾಹಿತಿ ನೀಡಿದರು. ಮೊದಲ ಹಂತದಲ್ಲಿ ಕೊರೊನಾ ಲಸಿಕೆಯನ್ನು ನಗರದಲ್ಲಿನ ಸರ್ಕಾರಿ, ಖಾಸಗಿ ಆಸ್ಪತ್ರೆಗಳ ವೈದ್ಯರು, ನರ್ಸ್ ಹಾಗೂ ಸಹಾಯಕ ಸಿಬ್ಬಂದಿ, ಎಲ್ಲ ಆಶಾ ಕಾರ್ಯಕರ್ತೆಯರು ಹಾಗೂ ಅಂಗನವಾಡಿ ಕಾರ್ಯಕರ್ತರು, ಸೋಂಕಿತರ ಚಿಕಿತ್ಸೆಯಲ್ಲಿ ತೊಡಗಿಸಿಕೊಂಡಿರುವ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ, ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳ ಎಲ್ಲ ಆಂಬುಲೆನ್ಸ್ ಸಿಬ್ಬಂದಿಗೆ ನೀಡಲಾಗುತ್ತದೆ.

ಎರಡನೇ ಹಂತದಲ್ಲಿ ನಾಗರಿಕರಿಗೆ ನೀಡಲಾಗುವುದು ಎಂದರು. ನಗರದಲ್ಲಿ ಕೊರೊನಾ ಸೋಂಕಿನ ಸಂಖ್ಯೆ ಇಳಿಕೆಯಾಗಿದೆ. ಆದ್ಯಾಗೂ ಹಲವು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ನಗರದಲ್ಲಿ ಕಳೆದ ಒಂದು ವಾರದಿಂದ 400ಕ್ಕಿಂತ ಹೆಚ್ಚು ಸೋಂಕು ಪ್ರಕರಣಗಳು ವರದಿಯಾಗುತ್ತಿಲ್ಲ. ಕೊರೊನಾ ಸೋಂಕು ಪಾಸಿಟಿವ್ ಪ್ರಮಾಣ 1.53 ನಷ್ಟಿದೆ. ಇನ್ನು ನಗರದಲ್ಲಿ ನವೆಂಬರ್ ತಿಂಗಳಿನಲ್ಲಿ ಕೊರೊನಾ ಸೋಂಕಿನಿಂದಾಗಿ 271 ಮಂದಿ ಮೃತಪಟ್ಟಿದ್ದರು. ಈ ತಿಂಗಳಲ್ಲಿ ಇಲ್ಲಿಯವರೆಗೆ 130 ಸೋಂಕಿನಿಂದ ಮೃತಪಟ್ಟಿರುವುದು ವರದಿಯಾಗಿದೆ ಎಂದು ತಿಳಿಸಿದರು.



> “ಬ್ರಿಟನ್‌ನಲ್ಲಿ ಕೊರೊನಾ ಹೊಸ ಪ್ರಭೇದ ಪತ್ತೆಯಾಗಿದ್ದು, ಅಲ್ಲಿ ಕೆಲವು ನಿರ್ದಿಷ್ಟ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲಾಗಿದೆ. ಆದರೆ, ದೇಶದಲ್ಲಿ ಹಾಗೂ ಬೆಂಗಳೂರಿನಲ್ಲಿ ಕೊರೊನಾ ಎರಡನೇ ಅಲೆ ಇಲ್ಲ. ಈ ರೀತಿಯ ಯಾವುದೇ ಪ್ರಕರಣಗಳು ವರದಿಯಾಗಿಲ್ಲ. ಹೀಗಾಗಿ, ಜನ ಆತಂಕಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ.
>
> ■ **ಮಂಜುನಾಥ್ ಪ್ರಸಾದ್**
> । ಪಾಲಿಕೆ ಆಯುಕ್ತ

ಸಂಯುಕ್ತ ಕರ್ನಾಟಕ

# ವೈಟ್‌ಟಾಪಿಂಗ್ ಸಂಚಾರ ಬಂದ್

**ಬೆಂಗಳೂರು:** ವೈಟ್‌ಟಾಪಿಂಗ್ ಕಾಮಗಾರಿ ಹಿನ್ನೆಲೆಯಲ್ಲಿ ಹೆಬ್ಬಾಳದಿಂದ ನಾಗವಾರ ಕಡೆ ಹೋಗುವ ರಿಂಗ್ ರಸ್ತೆ ಮಾರ್ಗದ ವೀರಣ್ಣಪಾಳ್ಯ ಮೇಲ್ಸೇತುವೆಯ ಭಾಗದಲ್ಲಿ ವಾಹನ ಸಂಚಾರ ಮಾರ್ಗ ಬದಲಾವಣೆ ಮಾಡಲಾಗಿದೆ.

ಒಟ್ಟು ಎರಡು ಹಂತದಲ್ಲಿ ಕಾಮಗಾರಿ ನಡೆಯಲಿದೆ.




ಮೊದಲ ಹಂತದಲ್ಲಿ ಹೆಬ್ಬಾಳದಿಂದ ನಾಗವಾರ ಕಡೆ ಹೋಗುವ ಮೇಲ್ಸೇತುವೆ ಒಂದು ಪಥದಲ್ಲಿ ಡಿ.22 ರಿಂದ ಜ.10ರವರೆಗೆ ಕಾಮಗಾರಿ ನಡೆಸಲಾಗುತ್ತದೆ. ಹಾಗಾಗಿ ಈ ಮಾರ್ಗದಲ್ಲಿ ಸಾಗುವ ವಾಹನಗಳು ಸರ್ವಿಸ್ ರಸ್ತೆಯ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗಿದೆ.

ಜ. 11ರ ನಂತರ ಎರಡನೇ ಹಂತದಲ್ಲಿ ನಾಗವಾರದಿಂದ ಹೆಬ್ಬಾಳ ಕಡೆ ಬರುವ ಪಥದಲ್ಲಿ ಕಾಮಗಾರಿ ನಡೆಸಲಾಗುವುದು. ಒಟ್ಟು 680 ಮೀಟರ್ ರಸ್ತೆಯಲ್ಲಿ ವೈಟ್‌ಟಾಪಿಂಗ್ ಮಾಡಲಾಗುತ್ತಿದೆ. ರಿಂಗ್ ರಸ್ತೆಯಲ್ಲಿ ವಾಹನ ಸಂಚಾರ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ವಾಹನ ಸವಾರರು ಸಾಧ್ಯವಾದಷ್ಟು ಪರ್ಯಾಯ ರಸ್ತೆಗಳನ್ನು ಬಳಕೆ ಮಾಡಿಕೊಳ್ಳುವಂತೆ ಬಿಬಿಎಂಪಿ ಕೇಂದ್ರ ಯೋಜನಾ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಎನ್.ಚಂದ್ರಶೇಖರ್ ತಿಳಿಸಿದ್ದು, ಕಾಮಗಾರಿ ಸಂದರ್ಭದಲ್ಲಿ ನಾಗರಿಕರು, ವಾಹನ ಸವಾರರು ಸಹಕರಿಸುವಂತೆ ಮನವಿ ಮಾಡಿಕೊಂಡಿದ್ದಾರೆ.

ಸಂಯುಕ್ತ ಕರ್ನಾಟಕ

ಹೊಸ ದಿಗಂತ

ಹೊಸ ದಿಗಂತ



## ಐರೋಪ್ಯ ರಾಷ್ಟ್ರಗಳಲ್ಲಿ ಹೊಸಬಗೆಯ ವೈರಾಣು | ಸಾಮಾಜಿಕ ಜಾಗೃತಿಯೊಂದೇ ಪರಿಹಾರ

# ಕೊರೋನಾ ಹೊಸ ಅಲೆಗೆ ಭಯಬೇಡ

• ದಿಗಂತ ವರದಿ, ಬೆಂಗಳೂರು

ಐರೋಪ್ಯ ರಾಷ್ಟ್ರಗಳಲ್ಲಿ ಹೊಸ ಬಗೆಯ ರೂಪಾಂತರಿತ ಕೊರೋನಾ ವೈರಾಣು ಕಂಡುಬಂದಿದೆ. ಇದು ವೇಗವಾಗಿ ಹರಡುವ ಲಕ್ಷಣ ಹೊಂದಿದ್ದರೂ, ರೋಗದ ತೀವ್ರತೆ ಹೆಚ್ಚಿಸುವುದಿಲ್ಲ, ಆದರೂ ಅತ್ಯಂತ ಎಚ್ಚರಿಕೆ ವಹಿಸಬೇಕಿದೆ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಹೇಳಿದರು.



ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದಂತೆ ವಿಧಾನಸೌಧದಲ್ಲಿ ಸಭೆ ನಡೆಸಿ ಬಳಿಕ ಸಚಿವರು ಸುದ್ದಿಗಾರರರೊಂದಿಗೆ ಮಾತನಾಡಿ, ಯು.ಕೆ.,ಡೆನ್ಮಾರ್ಕ್, ನೆದರ್‌ಲ್ಯಾಂಡ್ ಮೊದಲಾದ ಐರೋಪ್ಯ ರಾಷ್ಟ್ರಗಳಲ್ಲಿ ಹೊಸ ಬಗೆಯ ವೈರಾಣು ಕಾಣಿಸಿಕೊಂಡಿದೆ. ಈ ಬಗ್ಗೆ ಕೇಂದ್ರ ಸರ್ಕಾರದಿಂದ ಪತ್ರ ಬಂದಿದ್ದು, ಯುನೈಟೆಡ್ ಕಿಂಗ್‌ಡಮ್‌ನಿಂದ ಬರುವ ವಿಮಾನಗಳ ಆಗಮನವನ್ನು ನಿರ್ಬಂಧಿಸಲಾಗಿದೆ.

ಭಾನುವಾರದಂದು ಬ್ರಿಟಿಷ್ ಏರ್‌ವೇಸ್ ಮೂಲಕ ರಾಜ್ಯಕ್ಕೆ 291 ಜನರು ಆಗಮಿಸಿದ್ದಾರೆ. ಏರ್ ಇಂಡಿಯಾದಿಂದ 246 ಜನರು ಬಂದಿದ್ದು, ಈ ಪೈಕಿ 138 ಜನರು ನೆಗೆಟಿವ್ ವರದಿ ತಂದಿಲ್ಲ, ಇಂತಹವರನ್ನು ಒಂದು ವಾರ ಕಾಲ ಮನೆಯಲ್ಲೇ ಪ್ರತ್ಯೇಕ ನಿಗಾದಲ್ಲಿ ಇರಿಸಲಾಗುತ್ತದೆ. ಮಂಗಳವಾರದಿಂದಲೇ ವಿಮಾನ ನಿಲ್ದಾಣಗಳಲ್ಲಿ ಕಿಯೋಸ್ಕ್ ಇಟ್ಟು ತಪಾಸಣೆ ಮಾಡಲಾಗುವುದು ಎಂದರು.

**ವೇಗ ಹೆಚ್ಚು, ತೀವ್ರತೆ ಕಡಿಮೆ:** ಈ ವೈರಾಣು ಹರಡುವ ವೇಗ ಹೆಚ್ಚಿದೆ. ಆದರೆ ರೋಗ ತೀವ್ರವಾಗಿರುವುದಿಲ್ಲ, ಆದ್ದರಿಂದ ಮುಂಜಾಗ್ರತಾ ಕ್ರಮಗಳನ್ನು ವಹಿಸಬೇಕಿದೆ. ಹೊಸ ವರ್ಷದ ಅದ್ದೂರಿ ಆಚರಣೆಗಳನ್ನು ಕೈ ಬಿಡಬೇಕಿದೆ. ಕೆಲ ಹೋಟೆಲ್‌ಗಳಲ್ಲಿ ಬುಕಿಂಗ್ ಮಾಡಿ ಆಚರಣೆ ಮಾಡಲು ಸಿದ್ಧತೆ ನಡೆಸಿರುವುದು ಕಂಡುಬಂದಲ್ಲಿ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಸಚಿವರು ಖಡಕ್ ಎಚ್ಚರಿಕೆ ನೀಡಿದರು.

**ಜ.1 ರಿಂದ ಶಾಲಾ-ಕಾಲೇಜುಗಳ ಆರಂಭವಾಗುವುದರಿಂದ ಶೈಕ್ಷಣಿಕ ಚಟುವಟಿಕೆಗೆ ಸಂಬಂಧಿಸಿದಂತೆ ವಹಿಸಬೇಕಾದ ಎಚ್ಚರಿಕೆ ಕುರಿತು ಮತ್ತೊಮ್ಮೆ ಸಭೆ ನಡೆಸಿ ತೀರ್ಮಾನ ಕೈಗೊಳ್ಳಲಾಗುವುದು.**

■ ಡಾ.ಕೆ. ಸುಧಾಕರ್, ಆರೋಗ್ಯ ಸಚಿವ



### ವಿದೇಶದಿಂದ ಬಂದವರಿಗೆ ಕ್ವಾರಂಟೈನ್

ಕಳೆದ 14 ದಿನಗಳಲ್ಲಿ ಬೇರೆ ದೇಶಗಳಿಂದ ರಾಜ್ಯಕ್ಕೆ ಬಂದವರು ಆರ್‌ಟಿಪಿಸಿಆರ್ ಪರೀಕ್ಷೆ ಮಾಡಿಸಬೇಕು. ಯುನೈಟೆಡ್ ಕಿಂಗ್‌ಡಮ್‌ನಿಂದ ಬಂದವರು ಹಾಗೂ ಬೇರೆ ದೇಶಗಳಿಂದ ಬಂದವರಿಗೂ 7 ದಿನಗಳ ಕ್ವಾರಂಟೈನ್‌ಗೆ ಒಳಪಡಿಸಲಾಗುತ್ತದೆ. ಯುಕೆಯಿಂದ ಬಂದವರನ್ನು 7 ದಿನಗಳ ಸಾಂಸ್ಥಿಕ ಕ್ವಾರಂಟೈನ್‌ಗೆ ಒಳಪಡಿಸಬೇಕೆಂದು ಕೇಂದ್ರ ಆರೋಗ್ಯ ಸಚಿವಾಲಯ ಸೂಚಿಸಿದೆ ಎಂದು ತಿಳಿಸಿದರು.

### ನವ ಕೊರೋನಾ ಬಗ್ಗೆ ಆತಂಕ ಬೇಡ

ಬ್ರಿಟನ್‌ನಲ್ಲಿ ಜಾಸ್ತಿಯಾಗುತ್ತಿರುವ ಕೊರೋನಾ ವೈರಸ್ ಕುರಿತು ಕೇಂದ್ರ ಸರ್ಕಾರ ಜಾಗೃತವಾಗಿದ್ದು, ಯಾವುದೇ ಕಾರಣಕ್ಕೂ ದೇಶದ ಜನ ಭೀತಿಗೊಳಗಾಗುವುದು ಬೇಡ ಎಂದು ತಿಳಿಸಿದ್ದಾರೆ. ನೂತನ ರೂಪ ಪಡೆದಿರುವ ಕೊರೋನಾ ವೈರಸ್ ಕುರಿತು ವಾಸ್ತವಕ್ಕೆ ದೂರವಾದ ಮಾತುಗಳನ್ನು ಆಡಲಾಗುತ್ತಿದೆ. ಬರೀ ವದಂತಿ ಹಬ್ಬಿಸಲಾಗುತ್ತಿದೆ. ಆದರೆ, ಜನ ಅನವಶ್ಯಕವಾಗಿ ಇಂತಹ ಸುಳ್ಳು ಸುದ್ದಿಗಳಿಗೆ ಕಿವಿಗೊಡಬಾರದು ಎಂದು ಸಹ ಮನವಿ ಮಾಡಿದ್ದಾರೆ.

### ಷೇರು ಮಾರುಕಟ್ಟೆ ಕುಸಿತ

ಮುಂಬೈ: ಬ್ರಿಟನ್‌ನಲ್ಲಿ ಕೊರೋನಾ ವೈರಾಣುವಿನ ನೂತನ ತಳಿ ಪತ್ತೆಯಾಗಿದ್ದು,ಬ್ರಿಟನ್ ವಿಮಾನಗಳ ಮೇಲೆ ವಿವಿಧ ರಾಷ್ಟ್ರಗಳು ನಿರ್ಬಂಧ ಹೇರಲು ಆರಂಭಿಸುವ ಹಿನ್ನೆಲೆ, ಭಾರತದ ಷೇರು ಮಾರುಕಟ್ಟೆ ಸೋಮವಾರ ಕುಸಿತ ದಾಖಲಿಸಿದೆ. ಬಿಎಸ್‌ಇ ಸೂಚ್ಯಂಕ ಸೆನ್ಸೆಕ್ಸ್ 1,047 ಅಂಶಗಳು, ಎನ್‌ಎಸ್‌ಇ ಸೂಚ್ಯಂಕ ನಿಫ್ಟಿ 432 ಅಂಶಗಳು ಕುಸಿದ್ದು, ಹೂಡಿಕೆದಾರರಿಗೆ 6.6 ಲಕ್ಷ ಕೋಟಿ ರೂ. ನಷ್ಟವಾಗಿದೆ. ಇದರೊಂದಿಗೆ ಡಾಲರ್ ಎದುರಿಗೆ ರೂಪಾಯಿ ಮೌಲ್ಯ 23 ಪೈಸೆ ಕುಸಿದಿದೆ.

■ ಯು.ಕೆ.,ಡೆನ್ಮಾರ್ಕ್, ನೆದರ್‌ಲ್ಯಾಂಡ್ ಮೊದಲಾದ ಐರೋಪ್ಯ ರಾಷ್ಟ್ರಗಳಲ್ಲಿ ಹೊಸ ಬಗೆಯ ವೈರಾಣು ಕಾಣಿಸಿಕೊಂಡಿದೆ.

■ ಯುನೈಟೆಡ್ ಕಿಂಗ್‌ಡಮ್‌ನಿಂದ ಬರುವ ವಿಮಾನಗಳ ಆಗಮನಕ್ಕೆ ನಿರ್ಬಂಧ.

## ರಾಜ್ಯದಲ್ಲಿ ಕೊರೋನಾ ಸೋಂಕಿನ ಪ್ರಮಾಣ ಇಳಿಕೆ

• ದಿಗಂತ ವರದಿ,ಬೆಂಗಳೂರು

ರಾಜ್ಯದಲ್ಲಿ 772 ಹೊಸ ಕೋವಿಡ್ ಸೋಂಕಿತ ಪ್ರಕರಣಗಳು ಪತ್ತೆಯಾಗಿದೆ. 1261 ಮಂದಿ ಆಸ್ಪತ್ರೆಯಿಂದ ಗುಣಮುಖರಾಗಿ ಬಿಡುಗಡೆ ಹೊಂದಿದ್ದಾರೆ.




ಇದುವರೆಗೆ ರಾಜ್ಯದಲ್ಲಿ 9,10,241 ಮಂದಿಗೆ ಕೊರೋನಾ ಸೋಂಕು ದೃಢಪಟ್ಟಿದೆ. ಈ ಪೈಕಿ 14,001 ಸಕ್ರಿಯ ಪ್ರಕರಣಗಳಿವೆ. ಅಲ್ಲದೇ 219 ಮಂದಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸೋಮವಾರ 7 ಮಂದಿ ಕೊರೋನಾಗೆ ಸಾವನ್ನಪ್ಪಿದ್ದಾರೆ. ಇದುವರೆಗೆ ಸಾವನಪ್ಪಿರುವವರ ಸಂಖ್ಯೆ 12,016ಕ್ಕೇರಿದೆ.

ಜಿಲ್ಲಾವಾರು ಸೋಂಕಿತರ ವಿವರ: ಬಳ್ಳಾರಿ- 36,ಬೆಳಗಾವಿ -13,ಬೆಂಗಳೂರು ಗ್ರಾಮಾಂತರ -19,ಬೆಂಗಳೂರು ನಗರ-363,ಬೀದರ್-8,ಚಾಮರಾಜನಗರ-15 , ಚಿಕ್ಕಬಳ್ಳಾಪುರ-26, ಚಿಕ್ಕಮಗಳೂರು-4,ಚಿತ್ರದುರ್ಗ-19, ದಕ್ಷಿಣ ಕನ್ನಡ- 24,ದಾವಣಗೆರೆ-7,ಧಾರವಾಡ-15,ಗದಗ-5, ಹಾಸನ-32,ಹಾವೇರಿ-4,ಕಲಬುರಗಿ-10, ಕೊಡಗು-13, ಕೋಲಾರ-31,ಕೊಪ್ಪಳ-5,ಮಂಡ್ಯ-24,ಮೈಸೂರು-40, ರಾಯಚೂರು-4,ರಾಮನಗರ-5,ಶಿವಮೊಗ್ಗ-9,ತುಮಕೂರು-10, ಉಡುಪಿ-3,ಉತ್ತರ ಕನ್ನಡ-10,ವಿಜಯಪುರ-15, ಯಾದಗಿರಿ-3.

ಹೊಸ ದಿಗಂತ

ಹೊಸ ದಿಗಂತ

12
22 Dec 2020

# ಬಿಬಿಎಂಪಿ ಬಜೆಟ್ ಬಸ್ ಕಾರ್ಯಕ್ರಮಕ್ಕೆ ಚಾಲನೆ

**ಬೆಂಗಳೂರು:** ಪಾದಚಾರಿ ಮಾರ್ಗ ಹಾಗೂ ಸಾರ್ವಜನಿಕ ಶೌಚಾಲಯಗಳ ಕುರಿತು ಜನರಿಂದ ಬಂದ ಅನಿಸಿಕೆಗಳನ್ನು 2021-22ನೇ ಸಾಲಿನ ಆಯವ್ಯದಲ್ಲಿ ಸೇರಿಸಿ ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗುವುದು ಎಂದು ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ್ ಪ್ರಸಾದ್ ತಿಳಿಸಿದರು. ಪಾಲಿಕೆ ಮತ್ತು ಜನಾಗ್ರಹ ತಂಡ ವಾರ್ಷಿಕ ನಗರ ಬಜೆಟ್‌ಗಾಗಿ ಸಾರ್ವಜನಿಕ ಸಲಹೆ ಸಂಗ್ರಹಿಸಲು ಆರಂಭಿಸಿರುವ ಬಜೆಟ್ ಬಸ್ ಮತ್ತು ಏಳು ಎಲೆಕ್ಟ್ರಿಕ್ ಆಟೋಗಳ ಮೂಲಕ ಹಮ್ಮಿಕೊಂಡಿರುವ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನಗರದಲ್ಲಿ ಎಲ್ಲೆಲ್ಲಿ ಪಾದಚಾರಿ ಮಾರ್ಗಗಳ ಅವಶ್ಯಕತೆ ಇದೆ? ಎಲ್ಲೆಲ್ಲಿ ದುರಸ್ತಿಪಡಿಸಬೇಕಿದೆ ಎಂಬುದನ್ನು ಸಾರ್ವಜನಿಕರಿಂದ ಅಭಿಪ್ರಾಯ ಪಡೆದು ಆಯವ್ಯಯದಲ್ಲಿ ಸೇರಿಸಿ ಅದನ್ನು ಮೊದಲ ಆದ್ಯತೆಯಾಗಿ ತೆಗೆದುಕೊಳ್ಳಲಾಗುವುದು. ಈ ಮೈಟಿ ಮೈ ಬಜೆಟ್ ಅಭಿಯಾನವು ಮುಂದಿನ ಜ.7ರ ವರೆಗೆ ನಡೆಯಲಿದ್ದು, ಇದಲ್ಲದೆ ವೆಬ್ ಸೈಟ್ ಹಾಗೂ ವ್ಯಾಟ್ಸಪ್ ಮೂಲಕ ಅಭಿಪ್ರಾಯಗಳನ್ನು ತಿಳಿಸಬಹುದು ಎಂದರು.



## 585 ಸಾರ್ವಜನಿಕ ಶೌಚಾಲಯ

ನಗರದಲ್ಲಿ ಸುಮಾರು 585 ಸಾರ್ವಜನಿಕ ಶೌಚಾಲಯಗಳಿವೆ. ಆದರೆ ಒಂದು ಅಂದಾಜಿನ ಪ್ರಕಾರ 1,600 ಸಾರ್ವಜನಿಕ ಶೌಚಾಲಯಗಳು ನಗರದಲ್ಲಿಬೇಕು. ಇದಲ್ಲದೆ ಸಾರ್ವಜನಿಕ ಸ್ಥಳಗಳಲ್ಲಿ ಮೂತ್ರವಿಸರ್ಜನೆ ಮಾಡುವ ಎಲ್ಲೋ ಸ್ಪಾಟ್‌ಗಳನ್ನು ಗುರುತಿಸಿ ಅವುಗಳನ್ನು ತೆಗೆಯುವ ಕೆಲಸ ಮಾಡಬೇಕಿದೆ. ಈ ಸಂಬಂಧ ನಾಗರಿಕರಿಂದ ಅಭಿಪ್ರಾಯ ಸಂಗ್ರಹಿಸಲಾಗುವುದು ಎಂದರು.

ಸಂಜೆವಾಣಿ
1982

# ಬಿಬಿಎಂಪಿ ಬಜೆಟ್ ಮೂಲ ಸೌಕರ್ಯಗಳಿಗೆ ಆದ್ಯತೆ




**ಬಿಬಿಎಂಪಿ ಕೇಂದ್ರ ಕಛೇರಿ ಮುಂಭಾಗ ಮೈ ಸಿಟಿ ಮೈ ಬಜೆಟ್ ಅಭಿಯಾನ ಆಯುಕ್ತ ಮಂಜುನಾಥ್ ಪ್ರಸಾದ್ ಅವರು ಇಂದು ಚಾಲನೆ ನೀಡಿದರು. ಬಿಬಿಎಂಪಿ ಅಧಿಕಾರಿಗಳು ಇದ್ದಾರೆ.**

ಬೆಂಗಳೂರು, ಡಿ.21– ಪ್ರಸ್ತುತ ಸಾಲಿನ ಬಿಬಿಎಂಪಿ ಬಜೆಟ್ ನಲ್ಲಿ ಬೆಂಗಳೂರು ವ್ಯಾಪ್ತಿಯಲ್ಲಿ ಸಾಮಾಜಿಕ ಮೂಲಸೌಕರ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ಪಾಲಿಕೆ ಆಯುಕ್ತ ಮಂಜುನಾಥ್ ಪ್ರಸಾದ್ ತಿಳಿಸಿದರು.

ನಗರದಲ್ಲಿಂದು ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಜನಾಗ್ರಹ ತಂಡದ ಸಹಯೋಗದೊಂದಿಗೆ ಆಯೋಜಿಸಿರುವ 'ಮೈ ಸಿಟಿ ಮೈ ಬಜೆಟ್ ಅಭಿಯಾನ ಮತ್ತು ಬಜೆಟ್ ಬಸ್ ಮತ್ತು 7 ಎಲೆಕ್ಟ್ರಿಕ್ ಆಟೋಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಬೆಂಗಳೂರಿನಲ್ಲಿಯೇ 14 ಸಾವಿರ ಕಿಲೋ ಮೀಟರ್ ನಷ್ಟು ರಸ್ತೆ ಇದೆ. ಆದರೆ, ಇಲ್ಲಿ ಪಾದಚಾರಿಗಳಿಗೆ ಅವಕಾಶವೇ ಕಡಿಮೆ.ಹಲವು ಕಡೆ ಪಾದಚಾರಿ ಮಾರ್ಗ ನಿರ್ಮಾಣ ಮಾಡಿದರೆ, ನಗರದಲ್ಲಿ ಸಂಚಾರ ದಟ್ಟಣೆ, ವಾಹನ ಬಳಕೆಯೂ ಕಡಿಮೆ ಆಗಲಿದೆ ಎಂದರು.

ಸಿಲಿಕಾನ್ ಸಿಟಿ ಬೆಂಗಳೂರಿನ ಹವಮಾನಕ್ಕೆ ತಕ್ಕಂತೆ ನಾವು ಕಾಲ್ನಡಿಗೆ ಮೂಲಕವೇ ಪ್ರಯಾಣ ಮಾಡಬೇಕಾಗಿದೆ ಎಂದ ಅವರು, ಕೆಲ ಸರ್ವೆ ಪ್ರಕಾರ ಬಿಎಂಟಿಸಿಯಲ್ಲಿ ನಿತ್ಯ 50 ಲಕ್ಷ ಪ್ರಯಾಣಿಕರು ಪ್ರಯಾಣ ಮಾಡುತ್ತಾರೆ.ಆದರೆ, ಪಾದಚಾರಿ ಮಾರ್ಗ ಸುರಕ್ಷಿತವಾಗಿದ್ದರೆ, ಹಲವು ವಾಹನವೇ ಹತ್ತುವುದಿಲ್ಲ.ಹಾಗಾಗಿ, ಈ ಬಾರಿಗೆ ಬಜೆಟ್ ನಲ್ಲಿ ಈ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳಲಾಗಿದೆ ಎಂದು ನುಡಿದರು.

ಅದೇ ರೀತಿಯಲ್ಲಿ, ನಗರದ ಜನಸಂಖ್ಯೆಯ ಅನುಗುಣವಾಗಿ ಮಾನದಂಡ ಪ್ರಕಾರ 1600 ಸಾರ್ವಜನಿಕ ಶೌಚಾಲಯಗಳು ಇರಬೇಕು.ಆದರೆ, ಬರೀ 585 ಇದ್ದು, ಇದರ ಸಂಖ್ಯೆ ಹೆಚ್ಚಿಸುವ ನಿಟ್ಟಿನಲ್ಲಿ ಈ ಬಾರಿಯ ಬಜೆಟ್ ನಲ್ಲಿ ಆದ್ಯತೆ ನೀಡಲಾಗುವುದು ಎಂದು ಆಯುಕ್ತ ಭರವಸೆ ನೀಡಿದರು.

ಬಿಬಿಎಂಪಿ ಮೈಸಿಟಿಮೈಬಜೆಟ್ ಬಸ್ 2021–22 ಅಭಿಯಾನಕ್ಕಾಗಿ ಕ ಜನಾಗ್ರಹ ತಂಡವು ಸಾರ್ವಜನಿಕ ಸಲಹೆಗಳನ್ನು ಸಂಗ್ರಹಿಸಲಿದ್ದು, ಈ ಬಾರಿ ಸಾರ್ವಜನಿಕ ಶೌಚಾಲಯ ಮತ್ತು ಪಾದಚಾರಿ ಮಾರ್ಗಗಳ ಬಗ್ಗೆ ನಾಗರಿಕರ ಪ್ರತಿಕ್ರಿಯೆ ಪಡೆಯುವ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ. ಹಾಗಾಗಿ, ಸಾರ್ವಜನಿಕ ಈ ಅಭಿಯಾನದಲ್ಲಿ ಪಾಲ್ಗೊಂಡು ತಮ್ಮ ಸಲಹೆಗಳನ್ನು ನೀಡಬೇಕೆಂದು ಹೇಳಿದರು.

ಸಮಸ್ತ ಕನ್ನಡಿಗರ ನಂ.1 ಸಂಜೆ ದಿನಪತ್ರಿಕೆ
ಈ ಸಂಜೆ

## ಕೊರೊನಾ ಲಸಿಕೆ ಸಂಗ್ರಹಣಾ ಸಾಮರ್ಥ್ಯ

# ಹೆಚ್ಚಳಕ್ಕೆ ಕೇಂದ್ರ ಸಮ್ಮತಿ

**ಬೆಂಗಳೂರು, ಡಿ.21-** ಕೇಂದ್ರ ಸರ್ಕಾರ ನಗರದಲ್ಲಿ ಕೊರೊನಾ ವ್ಯಾಕ್ಸಿನ್ ಶೇಖರಣಾ ಘಟಕ ನಿರ್ಮಾಣಕ್ಕೆ ಸಮ್ಮತಿ ಸೂಚಿಸಿದ್ದು, ಶೀಘ್ರದಲ್ಲೇ ಘಟಕ ನಿರ್ಮಾಣ ಮಾಡಲಾಗುವುದು ಎಂದು ಬಿಬಿಎಂಪಿ ಆಯುಕ್ತ ಮಂಜುನಾಥ ಪ್ರಸಾದ್ ತಿಳಿಸಿದರು.

ಬಿಬಿಎಂಪಿ ಮತ್ತು ಜನಾಗ್ರಹ ತಂಡ ವಾರ್ಷಿಕ ನಗರ ಬಜೆಟ್‌ಗಾಗಿ ಸಾರ್ವಜನಿಕ ಸಲಹೆ ಸಂಗ್ರಹಿಸಲು ಆರಂಭಿಸಿರುವ ಬಿಬಿಎಂಪಿ ಮೈ ಸಿಟಿ ಮೈ ಬಜೆಟ್ ಬಸ್ ಅಭಿಯಾನಕ್ಕೆ ಚಾಲನೆ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಗರದಲ್ಲಿ ಸದ್ಯ 25 ಲಕ್ಷ ವ್ಯಾಕ್ಸಿನ್ ಶೇಖರಣೆಗೆ ಅವಕಾಶವಿದೆ. ಅದರ ಸಾಮರ್ಥ್ಯವನ್ನು ಹೆಚ್ಚಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ವ್ಯಾಕ್ಸಿನ್ ಲಭ್ಯವಾದ ತಕ್ಷಣ ಆರೋಗ್ಯ ಕಾರ್ಯಕರ್ತರಿಗೆ ಲಸಿಕೆ ವಿತರಿಸಲು ಬಿಬಿಎಂಪಿ ಈಗಾಗಲೇ ಸಿದ್ಧ. ಒಂದೂವರೆ ಲಕ್ಷ ಜನರ ಪಟ್ಟಿಯನ್ನು ಕೇಂದ್ರಕ್ಕೆ ರವಾನೆ ಮಾಡಲಾಗಿದ್ದು, ಲಸಿಕೆ ವಿತರಣೆಯ ಜವಾಬ್ದಾರಿಯನ್ನು ಆರೋಗ್ಯ ಇಲಾಖೆ ನೋಡಿಕೊಳ್ಳುತ್ತಿದೆ ಎಂದರು.

ನಗರದಲ್ಲಿ ಕೊರೊನಾ ಆತಂಕ ಕಡಿಮೆಯಾಗಿದೆ. ಪ್ರತಿ ನಿತ್ಯ 45 ಸಾವಿರ ಪರೀಕ್ಷೆ ನಡೆಸಲಾಗುತ್ತಿದೆ. ಜನರು ಆತಂಕ ಪಡುವ ಅವಶ್ಯಕತೆಯಿಲ್ಲ. ಪಾಸಿಟಿವ್ ಪ್ರಮಾಣ ಶೇ.1.53ರಷ್ಟಿದೆ ಎಂದರು.

ಭಾರತದಲ್ಲಿ ಕೊರೊನಾ ವೈರಸ್ ಬದಲಾಗಿಲ್ಲ. ಮಹದೇವಪುರ, ಬೊಮ್ಮನಹಳ್ಳಿ, ದಾಸರಹಳ್ಳಿ ಮತ್ತಿತರ ಪ್ರದೇಶಗಳಲ್ಲಿ ಅತಿ ಹೆಚ್ಚು ಪರೀಕ್ಷೆ ನಡೆಸುತ್ತಿದ್ದೇವೆ. ತಜ್ಞರ ಜತೆ ನಿರಂತರ ಸಂಪರ್ಕದಲ್ಲಿದ್ದು, ಪ್ರತಿ ನಿತ್ಯ 400ಕ್ಕಿಂತ ಕಡಿಮೆ ಕೇಸ್‌ಗಳು ಪತ್ತೆಯಾಗುತ್ತಿವೆ ಎಂದು ಮಂಜುನಾಥ್ ಪ್ರಸಾದ್ ವಿವರಿಸಿದರು.



ಕೊರೊನಾ ಸೋಂಕಿನ ಬಗ್ಗೆ ನಿರ್ಲಕ್ಷ್ಯ ವಹಿಸುತ್ತಿರುವುದೇ ಸಾವಿಗೆ ಕಾರಣವಾಗುತ್ತಿದೆ. ಅನ್ಯ ರೋಗ ಲಕ್ಷಣವಿದ್ದವರು ಕೊರೊನಾ ಪರೀಕ್ಷೆ ಮುಗಿಸಿಕೊಂಡು ಅಗತ್ಯ ಔಷಧೋಪಚಾರ ಪಡೆದು ಕಾಲ ಕ್ರಮೇಣ ಟೆಸ್ಟ್ ಮಾಡಿಸಿಕೊಳ್ಳುವುದನ್ನು ನಿಲ್ಲಿಸಬಹುದಾಗಿದೆ ಎಂದು ಅವರು ಹೇಳಿದರು.

ರೋಗ ಲಕ್ಷಣ ಕಾಣಿಸಿಕೊಂಡವರು ಖಾಸಗಿ ಆಸ್ಪತ್ರೆಗಳಲ್ಲಿ ಬೆಡ್‌ಗಳನ್ನು ಕಾಯ್ದಿರಿಸುವ ಅಗತ್ಯವಿಲ್ಲ. ಶೇ.90ರಷ್ಟು ಸರ್ಕಾರಿ ಆಸ್ಪತ್ರೆಗಳ ಬೆಡ್‌ಗಳು ಖಾಲಿ ಇರುವುದರಿಂದ ಸೋಂಕು ಕಾಣಿಸಿಕೊಂಡವರಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಉತ್ತಮ ವ್ಯವಸ್ಥೆ ಮಾಡಲಾಗುವುದು ಎಂದು ಆಯುಕ್ತರು ಭರವಸೆ ನೀಡಿದರು.

**ಅಪಾರ್ಟ್‌ಮೆಂಟ್‌ಗಳಿಗೆ ಕಹಿ ಸುದ್ದಿ:** ಹೊಸ ವರ್ಷ ಹಾಗೂ ಕ್ರಿಸ್‌ಮಸ್ ಆಚರಣೆಗಳಿಗೆ ಅಪಾರ್ಟ್‌ಮೆಂಟ್‌ನಲ್ಲಿ ಅವಕಾಶ ನಿರಾಕರಿಸಲಾಗಿದೆ. ಕಡಿಮೆ ಪ್ರಮಾಣದ ಜನರು ತಮ್ಮ ಫ್ಲ್ಯಾಟ್‌ಗಳಲ್ಲಿ ಸರಳವಾಗಿ ಹೊಸ ವರ್ಷ ಆಚರಿಸಿಕೊಳ್ಳಬಹುದು. ಲಾಬಿಗಳಲ್ಲಿ ಹಾಗೂ ಟೆರಸ್ ಮೇಲೆ ಹೆಚ್ಚು ಜನರು ಗುಂಪು ಗೂಡಿ ಯಾವುದೇ ಕಾರ್ಯಕ್ರಮ ಮಾಡುವಂತಿಲ್ಲ. ಒಂದು ವೇಳೆ ನಿಯಮ ಉಲ್ಲಂಘಿಸಿದರೆ ಅಂತಹವರ ಮೇಲೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಈ ಬಗ್ಗೆ ರೆಸಿಡೆನ್ಸ್ ವೆಲ್‌ಫೇರ್‌ಗಳು ಗಮನ ಹರಿಸಬೇಕು ಎಂದು ಮನವಿ ಮಾಡಿಕೊಂಡರು.

ನಿಯಮ ಉಲ್ಲಂಘಿಸಿ ಸಂಭ್ರಮಾಚರಣೆ ನಡೆಸುವವರ ಮೇಲೆ ಹದ್ದಿನ ಕಣ್ಣಿಡಲು 440 ಮಾರ್ಷಲ್‌ಗಳನ್ನು ನಿಯೋಜಿಸಲಾಗಿದೆ. ಇವರೊಂದಿಗೆ ಪೊಲೀಸರು ಕಾರ್ಯಾಚರಣೆ ನಡೆಸಲು ಸಮ್ಮತಿಸುವುದರಿಂದ ಅಪಾರ್ಟ್‌ಮೆಂಟ್ ನಿವಾಸಿಗಳು ಎಚ್ಚರ ವಹಿಸಬೇಕು ಎಂದು ಅವರು ಎಚ್ಚರಿಸಿದರು.